ಜನಶಕ್ತಿ
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯಸಮಿತಿಯ ವಾರಪತ್ರಿಕೆ
ಸಂಪುಟ ೧೧ ಸಂಚಿಕೆ ೨೨ ಮೇ ೨೮, ೧೯೮೯
ಬೆಲೆ ರೂ. ೧-೦೦

ಎನ್.ಎಲ್. ಇನ್ನಿಲ್ಲ



ಕಾಮ್ರೇಡ್ ಎನ್.ಎಲ್. ಲಾಲ್ ಸಲಾಂ

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲೊಬ್ಬರಾದ ಮತ್ತು ತನ್ನ ಸಮಸ್ತ ಜೀವನವನ್ನು ಪಕ್ಷ ಮತ್ತು ಕಾರ್ಮಿಕ ವರ್ಗದ ಆಂದೋಲನಕ್ಕೆ ಮುಡಿಪಿಟ್ಟ ಕಾಮ್ರೇಡ್ ಎನ್.ಎಲ್.ಉಪಾಧ್ಯಾಯರು 26 ಮೇ, 1989 ರ ನಸುಕಿನಲ್ಲಿ ಬೆಂಗಳೂರಿನ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಹೃದಯ ಸ್ತಂಭನದಿಂದ ತೀರಿಕೊಂಡರು. ಕಳೆದ ಒಂದು ವರ್ಷದಿಂದ ಎರಡೂ ಮೂತ್ರ ಪಿಂಡಗಳು ನಿಷ್ಕ್ರಿಯಗೊಂಡಿದ್ದರಿಂದ ಅವರು ಡಯಾಲಿಸಿಸ್ ಚಿಕಿತ್ಸೆ ಪಡೆಯುತ್ತಿದ್ದರು.

ಎನ್.ಎಲ್. ಇನ್ನಿಲ್ಲ,



ಪಿ.ರಾಮಚಂದ್ರರಾವ್.

ಕಾಮ್ರೇಡ್ ಎನ್.ಎಲ್.ಉಪಾಧ್ಯಾಯರ ನಿಧನದಿಂದಾಗಿ ಕರ್ನಾಟಕದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಘಟಕವು ಒಬ್ಬ ಮಹಾ ಮುತ್ಸದ್ಧಿಯನ್ನು ಕಳೆದು ಕೊಂಡಿದೆ. ದೀರ್ಘಕಾಲದ ಅನಾರೋಗ್ಯದಿಂದ ಸಕ್ರಿಯ ರಾಜಕೀಯ ಚಟುವಟಿಕೆಗಳನ್ನು ನಡೆಸುವುದು ಅವರಿಗೆ ಕಷ್ಟ ಸಾಧ್ಯವಾದರೂ, ಇದ್ದಲ್ಲಿಂದಲೇ ಪಕ್ಷದ ರಾಜ್ಯ ಘಟಕದ ಕಾರ್ಯ ಕಲಾಪಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಸಮಯದಲ್ಲಿ ಸೂಕ್ತ ಸಲಹೆ ಸೂಚನೆಗಳನ್ನು ಕೊಡುತ್ತಾ ಬಂದಿದ್ದಾರೆ ಕಾ|| ಎನ್.ಎಲ್.

ಕರ್ನಾಟಕದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪಕರಲ್ಲಿ ಕಾ|| ಎನ್.ಎಲ್. ಪ್ರಮುಖರು. ಕಮ್ಯುನಿಸ್ಟ್ ಪಕ್ಷದ ಮೇಲೆ ಅಪಪ್ರಚಾರದ ಸುರಿಮಳೆ ಯನ್ನು ಬಂಡವಾಳಶಾಹಿಗಳೂ, ಕಾಂಗ್ರೆಸ್ಸಿನ ಕೆಲವು ಪ್ರಮುಖ ಮುಂದಾಳುಗಳೂ ಬುದ್ಧಿಪೂರ್ವಕವಾಗಿ ಸುರಿಯುತ್ತಿದ್ದಾಗ, ಕಮ್ಯುನಿಸ್ಟರು ಅಪ್ಪಟ ದೇಶ ಪ್ರೇಮಿಗಳು, ಅದೇ ಸಮಯದಲ್ಲಿ ಅಂತರ ರಾಷ್ಟ್ರೀಯ ವಾದಿಗಳು ಎಂಬುದನ್ನು ತಮ್ಮ ಜೀವನ ದಲ್ಲಿ ಆರಂಭದಿಂದ ಕೊನೆಯವರೆಗೆ ತೋರಿಸಿಕೊಟ್ಟವರು ಕಾ|| ಎನ್.ಎಲ್.

ಭಾರತದಂತಹ ಕಡು ಬಡವರ ದೇಶದಲ್ಲಿ ರಾಜಕಾರಣಿಗಳು ಅಂದರೆ ಜನರ ಪ್ರತಿನಿಧಿಗಳು - ಧ್ಯೇಯ ಭರಿತರಾಗಿ ಸರಳ ಜೀವಿಗಳಾಗಿದ್ದರೆ ಮಾತ್ರ ಇಂದಲ್ಲ ನಾಳೆ ದೇಶದ ಬಡ ಜನರ ಹಿತಗಳನ್ನು ರಕ್ಷಿಸುವ ವ್ಯವಸ್ಥೆ ಏರ್ಪಡಲು ಸಾಧ್ಯ ಎಂಬುದನ್ನು ತಮ್ಮ ಜೀವನದಲ್ಲಿ ಉದ್ದಕ್ಕೂ ಅಕ್ಷರಶಃ ಪಾಲಿಸಿ ಕೊಂಡು ಬಂದವರು ಎನ್.ಎಲ್.

ಕಮ್ಯುನಿಸ್ಟರು ಎಂದರೆ ಹಿಂಸಾವಾದಿ ಗಳು, ಕಮ್ಯುನಿಸ್ಟರು ಎಂದರೆ ಸಂಸ್ಕೃತಿ ಹೀನರು ಎಂದೆಲ್ಲಾ ಅಪಪ್ರಚಾರ ಗೈಯುತ್ತಾ ಬಂದ ಈಗಲೂ ಅಪ ಪ್ರಚಾರಗೈಯುತ್ತಿರುವವರಿಗೆ ಜೀವಂತ ಸವಾಲಾಗಿ ಎಂಬಂತೆ ಸೌಮ್ಯತೆಯ ಮೂರ್ತಿಯಾಗಿ ಜೀವಿಸಿದರು ಎನ್.ಎಲ್.

'40 ರ ದಶಕದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವುದು ಸುಲಭವಲ್ಲ. ಪಕ್ಷದ ಕಾಲ ಗುಪ್ತವಾಗಿದ್ದು, ಬಂದೆಡೆ ಕಾರ್ಮಿಕರ-ರೈತರ-ವಿದ್ಯಾರ್ಥಿ ಯುವ ಜನರ ಶಕ್ತಿಗಳನ್ನೆತ್ತಿ ಅವರ ಸಂಘಟನೆಗಳನ್ನು ಮಾಡುತ್ತಿರುವಾಗಲೇ, ಈ ಸಂಘಟನೆಗಳ ನೇತೃತ್ವದಲ್ಲಿ ನಡೆಯುವ ಹೋರಾಟಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವರಲ್ಲಿ ಎದ್ದು ಬರುವವರನ್ನು ವ್ಯಕ್ತಿಗತವಾಗಿ ಗುರುತಿಸಿ, ಸಂಪರ್ಕಿಸಿ, ಅವರೊಡನೆ ಸೈದ್ಧಾಂತಿಕ ಚರ್ಚೆ ನಡೆಸಿ, ಅವರನ್ನು "ಸಾಮ್ಯವಾದ" ದೆಡೆಗೆ ಒಲಿಸಿ ಅವರನ್ನು ಕಮ್ಯುನಿಸ್ಟ್ ಪಕ್ಷದ

ಪುಟ 2

ಕಾಮ್ರೇಡ್ ಎನ್.ಎಲ್. ಅಮರ್ ರಹೇ
ಕಾ ಮ್ರೇಡ್ ಎನ್.ಎಲ್.ಗೆಕೆಂಪುವಂದನೆ
ಕೆಂಪುವಂದನೆ, ಕೆಂಪುವಂದನೆ.

ಕಾ ಮ್ರೇಡ್ ಎನ್.ಎಲ್. ಎಂದೇ ಎಲ್ಲರೂ ಆತ್ಮೀಯವಾಗಿ ಕರೆಯುತ್ತಿದ್ದ ಎನ್.ಎಲ್. ಉಪಾಧ್ಯಾಯ ಅವರ ಮನೆಯ ಮುಂದೆ ನೆರೆದಿದ್ದ ದುಃಖತಪ್ತ ಸಂಗಾತಿಗಳು ಘೋಷಣೆ ಮೊಳಗಿಸುತ್ತಿದ್ದರು. ಆ ಘೋಷಣೆ ಒಡಲಾಳದಲ್ಲಿ ಅಪಾರ ನೋವಿತ್ತು. ಹಲವರ ಕಣ್ಣುಗಳಲ್ಲಿ ನೀರು ದುಮ್ಮಿಕ್ಕುತ್ತಿತ್ತು.

ಕಾ ಮ್ರೇಡ್ ಎನ್.ಎಲ್. ಇನ್ನಿಲ್ಲವಾದ ಸುದ್ದಿ ಕಾರ್ಮಿಕ,ರೈತ,ಇತರೆ ಸಂಗಾತಿಗಳ ಮಧ್ಯೆ ಹರಡುತ್ತಿದ್ದಂತೆ ಮೌನ ಹೆಪ್ಪು ಗಟ್ಟುತ್ತಿತ್ತು. ಎನ್.ಎಲ್‌ರವರನ್ನು ಅಂತ್ಯ ಕ್ರಿಯೆಗೆ ಸಾಗಿಸುವ ಮುನ್ನ ಬೆಳಿಗ್ಗೆ ೨೦ ರ ಸುಮಾರಿಗೆ ದುಃಖತಪ್ತ ಸಂಗಾತಿಗಳು ಕಪ್ಪು ಬಾವುಟ ಹಿಡಿದು ಸಾಲಾಗಿ ಹೆಜ್ಜೆ ಹಾಕುತ್ತಿದ್ದರು. ಮೌನ ಮೆರವಣಿಗೆಯಲ್ಲಿ ಜೊತೆ ಜೊತೆಗೇ ಸಾಗಿ ಬಂತು.

ಮನೆಯ ಮುಂದೆ ಇರಿಸಿದ್ದ ಎನ್.ಎಲ್. ಅವರ ದೇಹಕ್ಕೆ ಸಂಗಾತಿಗಳು ಹೂ ಗುಚ್ಛಗಳನ್ನರ್ಪಿಸಿದರು. ಹೂ ಹಳೆಗಳು ಎನ್.ಎಲ್. ದೇಹದ ಸುತ್ತ ಹರಡಿಕೊಂಡಿದ್ದವು. ಎನ್.ಎಲ್. ಜನಜೀವನದ ಮಧ್ಯೆ ಹೋರಾಟದ ಒಡಲಲ್ಲಿ ಹೇಗೆ ಬೇರುಬಿಟ್ಟಿದರು ಎಂಬುದಕ್ಕೆ ಅವರ ಮನೆಯ ಮುಂದೆ ಕಿಕ್ಕಿರಿದಿದ್ದ ಜನಸಂದಣಿಯೆ ಸಾಕ್ಷಿ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ,ಬೆಂಗಳೂರು ಜಿಲ್ಲಾ ಸಮಿತಿ, ಹೋಟೆಲ್ ಕಾರ್ಮಿಕರ ಸಂಘ, ವೆಲ್‌ಕ್ಯಾಸ್ಟ್, ಎ.ಕೆ.ಜಿ.ಲೈಬ್ರರಿ, ಬಿ.ಎಚ್.ಇ.ಎಲ್. ಮೈಕೋ, ಎಸ್.ಎಫ್.ಐ. ಡಿ.ವೈ.ಎಫ್.ಐ. ಕೆ.ಆರ್.ಪುರಂ ಕಾರ್ಮಿಕರು, ಐ.ಟಿ.ಐ ಸಂಗಾತಿಗಳು ಅಲ್ಲದೆ ಭಾರತ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ ರಾಜ್ಯ ಜನತಾದಳ, ಸ್ವಾತಂತ್ರ್ಯ ಹೋರಾಟಗಾರರ ಸಮಿತಿಯ ಸಂಗಾತಿಗಳು ಪುಷ್ಪಗುಚ್ಛಗಳನ್ನರ್ಪಿಸಿ ತಮ್ಮ ಶೋಕ ವ್ಯಕ್ತಪಡಿಸಿದರು.

ಕಾಮ್ರೇಡ್ ಎನ್.ಎಲ್. ಇನ್ನಿಲ್ಲವಾದ ಸುದ್ದಿ ಪತ್ರಿಕೆಗಳ ಮೂಲಕ ರಾಜ್ಯದ ಎಲ್ಲೆಡೆ ಹರಡುತ್ತಿದ್ದಂತೆಯೇ ರಾಜ್ಯದ ವಿವಿಧ ಭಾಗಗಳಿಂದ ಸಂಗಾತಿಗಳು ಧುಮ್ಮಿಕ್ಕಲಾರಂಭಿಸಿದ್ದರು. ಎಲ್ಲರ ಮುಖದಲ್ಲೂ ನೋವು ಮನೆಮಾಡಿತ್ತು.

ವಿಶಾಲ ಲಾರಿಯಲ್ಲಿ ಕಾಮ್ರೇಡ್ ಎನ್.ಎಲ್. ಅವರ ಪಾರ್ಥಿವ ಶರೀರವನ್ನಿಟ್ಟಂತೆಯೇ ಮತ್ತೊಮ್ಮೆ ಘೋಷಣೆಗಳು ಮುಗಿಲು ಮುಟ್ಟಿದವು. ಕಾಮ್ರೇಡ್




| ಪುಟ 6 |



ಎನ್ನೆಲ್ ಎಂದೂ ಅವಿಸ್ಮರಣೀಯ

--- ಎನ್.ಕೆ. ಉಪಾಧ್ಯಾಯ



1912 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನಂದಿಕೂರು ಗ್ರಾಮದಲ್ಲಿ ಜನಿಸಿದ ಎನ್.ಎಲ್.ಉಪಾಧ್ಯಾಯರು 1933 ರಲ್ಲಿ ಸ್ನಾತಕ ಪದವಿ ಪಡೆದರು. ವಿದ್ಯಾರ್ಥಿ ದೆಸೆಯಲ್ಲಿ ಅವರು ಸ್ವಾತಂತ್ರ್ಯ ಆಂದೋಲನದಿಂದ ಪ್ರಭಾವಿತರಾಗಿದ್ದರು. ಮುಂಬೈಗೆ ಕೆಲಸವನ್ನು ಅರಸಿಕೊಂಡು ಹೋದಾಗ ಅಲ್ಲಿ ಕಾಮ್ರೇಡ್ ಬಿ.ಟಿ.ರಣದಿವೆ, ಪಿ.ಸಿ.ಜೋಷಿ, ಡಾ.ಜಿ.ಅಧಿಕಾರಿ ಮುಂತಾದ ಕಮ್ಯುನಿಸ್ಟ್ ಮುಖಂಡರ ಸಂಪರ್ಕಕ್ಕೆ ಬಂದರು. ಕಾಂಗ್ರೆಸ್ ಸಮಾಜವಾದೀ ಪಕ್ಷದಲ್ಲಿ ಅವರು ಜಯಪ್ರಕಾಶ್ ನಾರಾಯಣ್, ಅಶೋಕ ಮೆಹ್ತಾ, ಸೋಲಿಬಾಟ್ಲಿವಾಲಾ ಮುಂತಾದವರೊಂದಿಗೆ ಕೆಲಸ ಮಾಡಿದರು. 1938 ರಲ್ಲಿ ಅವರು ಗಿರಗಾಂವ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಚುನಾಯಿತರಾದರು. ಅದೇ ವರ್ಷ ಅಶೋಕ ಮೆಹ್ತಾರನ್ನು ಸೋಲಿಸಿ ಮುಂಬೈ ಪ್ರಾಂತ ಕಾಂಗ್ರೆಸ್ ಸಮಿತಿಗೆ ಅವರು ಆಯ್ಕೆಗೊಂಡರು.

1 ಮೇ 1940 ರಲ್ಲಿ ಸಾಮ್ರಾಜ್ಯಶಾಹೀ ಯುದ್ಧದ ಸಮಯದಲ್ಲಿ ದೇಶದ ಇತರ ಸಾವಿರಾರು ಕಮ್ಯುನಿಸ್ಟರಂತೆ ಅವರನ್ನೂ ಬಂಧಿಸಿ ನಾಸಿಕ್ ಜೈಲಿನಲ್ಲಿಡಲಾಯಿತು. 1942 ರಲ್ಲಿ ಅವರು ಬಿಡುಗಡೆಯಾಗಿ ಬಂದಾಗ ಪಕ್ಷದ ಕೇಂದ್ರ ಅವರನ್ನು ಕರ್ನಾಟಕದಲ್ಲಿ ಪಕ್ಷವನ್ನು ಸಂಘಟಿಸಲು ಕಳುಹಿಸಿತು. ಅಂದಿನಿಂದ ಅವರು ಕರ್ನಾಟಕದಲ್ಲಿ ಪಕ್ಷ, ಕಾರ್ಮಿಕ ಸಂಘಗಳು ಮತ್ತು ರೈತರನ್ನು ಸಂಘಟಿಸುವಲ್ಲಿ ದುಡಿದರು. ಅವರು 1968ರ ವರೆಗೆ ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ, 1988ರ ವರೆಗೆ ಸೆಕ್ರೆಟಾರಿಯೆಟ್ ಸದಸ್ಯರಾಗಿ ಮುಂದುವರಿದರು. ಮರಣದವರೆಗೆ ಅವರು ರಾಜ್ಯ ಸಮಿತಿ ಸದಸ್ಯರಾಗಿದ್ದರು. ಎನ್.ಎಲ್.ಅವಿಭಜಿತ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳಿಯ ಮತ್ತು ಕೇಂದ್ರ ಸಮಿತಿಯ ಸದಸ್ಯರಾಗಿದ್ದರು. ಪಕ್ಷ ಇಬ್ಭಾಗವಾದಾಗ ಅವರು ಸಿ.ಪಿ.ಐ. (ಎಂ) ಸೇರಿ ಕೇಂದ್ರ ಸಮಿತಿಗೆ ಆಯ್ಕೆಗೊಂಡರು.

ಮೈಸೂರಿನ ಜವಾಬ್ದಾರಿ ಸರ್ಕಾರ ಬೇಕೆಂಬ ಆಂದೋಲನದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರಿಂದ ಅವರನ್ನು ಮೈಸೂರು ಪ್ರಾಂತದಿಂದ ಗಡೀಪಾರು ಮಾಡಲಾಯಿತು. ಆಗ ಪಕ್ಷದ ರಾಜ್ಯ ಕೇಂದ್ರವನ್ನು ಹುಬ್ಬಳ್ಳಿಗೆ ವರ್ಗಾಯಿಸಿ ಅಲ್ಲಿಂದ ಕಾರವಾರ ಜಿಲ್ಲೆಯ ಮತ್ತು ಮುಂಬೈ ಕರ್ನಾಟಕ ಪ್ರದೇಶದ ಇತರ ಸ್ಥಳಗಳಲ್ಲಿ ಒಂದು ಬಲವಾದ ರೈತ ಆಂದೋಲನವನ್ನು ಅವರು ಕಟ್ಟಿದರು. ಇದರಿಂದಾಗಿ 1947 ರಲ್ಲಿ ಮುಂಬೈಯ ಮುರಾರ್ಜಿ ದೇಸಾಯಿಯ ಕಾಂಗ್ರೆಸ್ ಸರ್ಕಾರ ಕೂಡಾ ಅವರನ್ನು ಗಡೀಪಾರು ಮಾಡಿತು. ಕರ್ನಾಟಕ ಏಕೀಕರಣ ಆಂದೋಲನದಲ್ಲಿ ಅವರು ಸಕ್ರಿಯ ಪಾತ್ರ ವಹಿಸಿದರು.

ಹತ್ತು ವರ್ಷಗಳ ಹಿಂದೆ ಕೋಲಾರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ಪಕ್ಷಾಘಾತ ವುಂಟಾದಂದಿನಿಂದ ಅವರು ರಕ್ತ ಒತ್ತಡದಿಂದ ನರಳುತ್ತಿದ್ದರು. ಈ ಅವಧಿಯಲ್ಲಿ ಅವರು ಹರ್ನಿಯಾ ಆಪರೇಷನ್‌ಗೊಳಗಾಗಿದ್ದರು.

ಮುಂಬೈಯ ದಿನಗಳಲ್ಲಿ ಅವರು "ಸೀನಿಯರ್ ಉಪ" ಎಂದು ಜನಪ್ರಿಯರಾಗಿದ್ದರು. ಕರ್ನಾಟಕದಲ್ಲಿ "ಎನ್.ಎಲ್." ಎಂದು ಜನಪ್ರಿಯರಾಗಿದ್ದರು.

ಕಾಮ್ರೇಡ್ ಎನ್.ಎಲ್. ಮೃದು ಭಾಷಿಯಾಗಿದ್ದರೂ ಅತ್ಯುತ್ತಮ ರಾಜಕೀಯ ಸ್ಪಷ್ಟತೆ ಹೊಂದಿದ್ದರು. ಸಂಗಾತಿಗಳೊಂದಿಗೆ, ಇತರರೊಂದಿಗೆ ಅತ್ಯಂತ ಆತ್ಮೀಯತೆಯಿಂದ ಬೆರೆಯುತ್ತಿದ್ದರು. ಅವರೊಬ್ಬ ಉತ್ತಮ ವಾಗ್ಮಿ ಮತ್ತು ಲೇಖಕರಾಗಿದ್ದರು. ಅವರ ಅವಿಶ್ರಾಂತ ಪರಿಶ್ರಮದಿಂದಾಗಿ ಪಕ್ಷದ ಮುಖಪತ್ರಿಕೆ "ಜನಶಕ್ತಿ" ಹುಬ್ಬಳ್ಳಿಯಿಂದ 1948 ರಲ್ಲಿ ಪ್ರಕಟವಾಗಲಾರಂಭಿಸಿತು. ಈ ವಾರಪತ್ರಿಕೆ ಆ ಆರಂಭದ ದಿನಗಳಲ್ಲೂ 5000 ಪ್ರಸಾರ ಹೊಂದಿತ್ತು.

ಅವರ ರಾಜಕೀಯ ಸ್ಪಷ್ಟತೆ, ಪಕ್ಷದ ರಾಜಕೀಯ ನಿಲುವಿನ ಪ್ರತಿಪಾದನೆ, ಅವರ ಆತ್ಮೀಯ ನಡತೆ ಇವೆಲ್ಲದರಿಂದಾಗಿ ಎನ್.ಎಲ್. ಅಪಾರ ಹಿತೈಷಿಗಳ, ಅಭಿಮಾನಿಗಳ ಬಳಗ ಪಡೆದಿದ್ದರು.

ಕರ್ನಾಟಕದ ರಾಜಕೀಯದಲ್ಲಿ, ಒಂದು ಬಲವಾದ ರೈತ ಆಂದೋಲನ, ಕಾರ್ಮಿಕ ಸಂಘಟನೆ, ಯುವಜನ ಮತ್ತು ವಿದ್ಯಾರ್ಥಿ ಆಂದೋಲನ ಕಟ್ಟುವಲ್ಲಿ ಕಾಮ್ರೇಡ್ ಎನ್.ಎಲ್.ರ ಮಹತ್ವದ ಪಾತ್ರ ಅವಿಸ್ಮರಣೀಯ. ಪಕ್ಷದ ಮುಖಂಡರಾಗಿ ಅವರ ಪಾತ್ರ ಎಂದೆಂದೂ ನೆನಪಿನಲ್ಲಿ ಅಚ್ಚಳಿಯದೆ ಉಳಿಯುವಂತಹುದು. 1986 ರಲ್ಲಿ ಪಕ್ಷದ ಚಟುವಟಿಕೆಗಳನ್ನು ಚರ್ಚಿಸುತ್ತಾ ಕಾಮ್ರೇಡ್ ಬಿ.ಟಿ.ಆರ್. "ಕರ್ನಾಟಕದಲ್ಲಿ ಒಂದು ಸಮರಸ ಪೂರ್ಣ ಪಕ್ಷ ಕಟ್ಟುವಲ್ಲಿ ಎನ್.ಎಲ್. ರಂತಹ ಒಬ್ಬ ಸಂಗಾತಿ ಸಿಗಲಾರರು"ಎಂದು ಹೇಳಿದ ಮಾತು ಇಂದಿಗೂ ನಿಜ.

ಅವರು ನಮಗೆ ಸದಾ ಮಾರ್ಗದರ್ಶನ ವೀಯುತ್ತಾರೆ.

★ಪುಟ 1ರಿಂದ

ಮುಂದಾಳುಗಳಲ್ಲಿ ಪ್ರಮುಖರು. ಅಂದಿನ ರಾಷ್ಟ್ರೀಯ ಕೌನ್ಸಿಲ್‌ನಿಂದ 32 ಮಂದಿ ಮಾರ್ಕ್ಸಿಸ್ಟ್ ಮುಂದಾಳುಗಳು ಯಾಕೆ ಮತ್ತು ಯಾವ ಸಂದರ್ಭದಲ್ಲಿ ಇಳಿದು ಬರಬೇಕಾಯಿತು ಎಂಬುದನ್ನು ಕರ್ನಾಟಕ ರಾಜ್ಯದಾದ್ಯಂತ ತಿರುಗಾಟ ನಡೆಸಿ, ಪಕ್ಷದ ಸರ್ವ ಸದಸ್ಯರ ಸಭೆಗಳನ್ನು ನಡೆಸಿ ವಿವರಿಸಿ "ಡಾಂಗೆವಾದ" ದ ಅಪಾಯವನ್ನು ಕುರಿತು ಸದಸ್ಯರನ್ನು ಎಚ್ಚರಿಸಿ ಅವರನ್ನು ಮಾರ್ಕ್ಸ್‌ವಾದಿ ಪಕ್ಷದೆಡೆಗೆ ತಂದವರು ಕಾ॥ ಎನ್.ಎಲ್.

ಡಾಂಗೆಯ ಇಂದಿನ ಸ್ಥಿತಿ ಅಂದು ಕಾ॥ ಎನ್.ಎಲ್. ಕೊಟ್ಟ ಎಚ್ಚರಿಕೆ ಎಷ್ಟು ಸಮಂಜಸವಾಗಿತ್ತು ಎಂಬುದನ್ನು ಎಲ್ಲಾ ಸಂಗಾತಿಗಳು ಆದರ ಪೂರ್ವಕವಾಗಿ ಸ್ಮರಿಸಬಹುದು.

ಧ್ಯೇಯಕ್ಕಾಗಿ ಜೀವಿಸುವುದು ಕಷ್ಟ. ಅದರಲ್ಲೂ ಶ್ರಮಜೀವಿಗಳ ರಾಜ್ಯಾಧಿಕಾರಕ್ಕಾಗಿ ಹೋರಾಡುವುದು ಅತೀ ಕಷ್ಟ. ಅಂತಹ ಜೀವನದಲ್ಲಿ ಮತ್ತು ಹೋರಾಟದಲ್ಲಿ ನಂಬಿಕೆಯಿಟ್ಟು 77 ವರ್ಷಗಳ ಕಾಲ ಜೀವಿಸಿದ ಕಾ॥ ಎನ್.ಎಲ್. ಉಪಾಧ್ಯಾಯರು ನಮಗೆಲ್ಲಾ ಕಮ್ಯುನಿಸ್ಟ್ ಮೌಲ್ಯಗಳ ಸಂಕೇತ.

ಅವರ ಆದರ್ಶಗಳನ್ನು ಮುಂದಿಟ್ಟು ಇಂದಿನ ಅನುಕೂಲ ಪರಿಸ್ಥಿತಿಗಳನ್ನು ಉಪಯೋಗಿಸಿಕೊಂಡು ಕರ್ನಾಟಕದಲ್ಲಿ ಬಲಿಷ್ಠವಾದ ಮತ್ತು ವಿಶಾಲವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಚಳುವಳಿಯನ್ನು ಕಟ್ಟಿ ಬೆಳೆಸುವುದೇ ಕಾ॥ ಎನ್.ಎಲ್ ರವರಿಗೆ ನಾವು ಕೊಡುವ ನಿಜವಾದ ಶ್ರದ್ಧಾಂಜಲಿ!

ಸದಸ್ಯರಾಗಿ ಮಾಡುವುದು. ಅಂತಹ ಸದಸ್ಯರ ಗುಂಪುಗಳನ್ನು ಕಟ್ಟಿ ಅವರಲ್ಲಿ ಸಾಮೂಹಿಕ ನೇತೃತ್ವವನ್ನು ಬೆಳೆಸುವುದು ಎಷ್ಟು ಕಷ್ಟದ ಕೆಲಸ. ಅದನ್ನೂ ಮಾಡಿ ತನ್ನದೇ ಆದ ರೀತಿಯಲ್ಲಿ ಯಶಸ್ವಿಯಾದವರು ಕಾ॥ಎನ್. ಎಲ್.

ಭಾರತದಂತಹ ದೇಶದಲ್ಲಿ ಹರಿದು ಹಂಚಿಹೋಗಿದ್ದ ಕರ್ನಾಟಕದಲ್ಲಿ, ಸ್ವಾತಂತ್ರ್ಯ ಹೋರಾಟದ ಅನುಭವವನ್ನು ಮುಂಬೈ ಪ್ರಾಂತ್ಯದಲ್ಲಿ ಪಡೆದ ಕಾ॥ಎನ್.ಎಲ್ ಆಶ್ರಿತ ರಾಜ್ಯವಾದ ಮೈಸೂರಿನಲ್ಲಿ "ಕಾಂಗ್ರೆಸ್ ಪಕ್ಷವು ಗಾಂಧಿಯ ನೇತೃತ್ವದಲ್ಲಿ ಆಶ್ರಿತ ರಾಜ್ಯಗಳಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ನಡೆಸುವುದಕ್ಕೆ ಹಿಂದೇಟು ಹಾಕುತ್ತಿದ್ದಾಗ" ಕಮ್ಯುನಿಸ್ಟ್ ಪಕ್ಷದ ನಿರ್ದೇಶನದ ಪ್ರಕಾರ ಸ್ವಾತಂತ್ರ್ಯ ಹೋರಾಟಕ್ಕೆ ಅಡಿಗಲ್ಲು ಹಾಕಿದವರಲ್ಲಿ ಒಬ್ಬರು ಕಾ॥ ಎನ್.ಎಲ್. ರಾಜಭಕ್ತಿಯ ಗುಂಗು ಹರಡಿದಾಗ ಮೈಸೂರು ರಾಜರ ವಿರುದ್ಧದ ಚಳುವಳಿಯಲ್ಲಿ ಕಮ್ಯುನಿಸ್ಟ್ ಪಕ್ಷ ಅಂದು ದಿಟ್ಟ ಹೋರಾಟ ನಡೆಸಿತ್ತು ಎಂಬುದನ್ನು ನಾವಿಲ್ಲಿ ನೆನಪು ಮಾಡಬಹುದು.

ಕರ್ನಾಟಕದ ಕುರಿತು ಕನ್ನಡದ ಕುರಿತು ಇಂದು ಮಾತನಾಡುವವರು ಬಹಳಷ್ಟು ಮಂದಿ ಇದ್ದಾರೆ. ಆದರೆ 40-50 ರ ದಶಕದಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಮುಂದಾಳು ಗಳು ಕೆಲವೇ ಕೆಲವು. ಅಂತಹವರಲ್ಲಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಕಾರ್ಯದರ್ಶಿಯಾಗಿದ್ದ ಎನ್.ಎಲ್. ಉಪಾಧ್ಯಾಯ ಒಬ್ಬರು.

ಇಂದು ಭೂ ಸುಧಾರಣೆ, ರೈತರ ಹಕ್ಕುಗಳು, ಇತ್ಯಾದಿ ಇತ್ಯಾದಿಗಳ ಕುರಿತು ವ್ಯಾಖ್ಯಾನ ಮಾಡುವವರು, ಗುಡುಗುವವರು ಮತ್ತು ತಾವೇ ಭೂ ಸುಧಾರಣೆಗಳನ್ನು ಸಾಧಿಸಿದ್ದೇವೆ ಎಂದು ಹೇಳಿಕೊಳ್ಳುವವರು ಅನೇಕರಿದ್ದಾರೆ. ಅಂದರೆ 40 ರಲ್ಲಿ ಬ್ರಿಟಿಷರ ಅಡಿಯಲ್ಲೂ, ಬ್ರಿಟಿಷರ ಆಶ್ರಯ ರಾಜರ ಅಡಿಯಲ್ಲೂ, ಜಮೀನುದಾರ ಪದ್ಧತಿ ಮತ್ತು ಭೂ ಮಾಲಿಕ ಅಟ್ಟಹಾಸದಿಂದ ಮೆರೆಯುತ್ತಿದ್ದಾಗ ಉತ್ತರ ಕರ್ನಾಟಕ (ಕಾರವಾರ) ಜಿಲ್ಲೆಯಲ್ಲಿ ಪ್ರಪ್ರಥಮ ವಿಶಾಲ ಪ್ರಮಾಣದ ಉಗ್ರ ರೈತರ ಹೋರಾಟವನ್ನೂ ಹಾಗೂ ಕೋಲಾರ ಇನ್ನಿತರ ಜಿಲ್ಲೆಗಳಲ್ಲಿ ಇನಾಂದಾರಿ ಪದ್ಧತಿಯ ವಿರುದ್ಧ ದಿಟ್ಟ ಹೋರಾಟವನ್ನೂ ಸಂಘಟಿಸಿದವರು ಕಾ॥ ಎನ್.ಎಲ್. ಉಪಾಧ್ಯಾಯ ಮತ್ತು ಅವರ ಅನು ಯಾಯಿಗಳು. ಮುರಾರ್ಜಿ ದೇಸಾಯಿ ಯವರು ಗೇಣಿದಾರರ ಹಕ್ಕುಗಳನ್ನು ಮನ್ನಿಸಿ ಗೇಣಿ ಕೇವಲ 6ನೇ ಒಂದಂಶವೆಂದು ನಿರ್ಧರಿಸಿ "ಟೆನೆನ್ಸಿ ಕಾನೂನು" ನ್ನು ಮುಂಬೈ ಪ್ರಾಂತದಲ್ಲಿ ಜಾರಿಗೊಳಿಸಿದ್ದರಾದರೆ, ಅದಕ್ಕೆ ಕಾರವಾರ ಜಿಲ್ಲೆಯಲ್ಲಿ ಕಾ॥ ಎನ್.ಎಲ್. ಮತ್ತು ಡಾ॥ ಪೇರುಳೆಕರರ ನೇತೃತ್ವದಲ್ಲಿ ನಡೆದ ರೈತರ ಹೋರಾಟವು ಒಂದು ಮುಖ್ಯ ಹೊಣೆ ಎಂಬುದಂತೂ ಸತ್ಯ.

ಕಾ॥ ಎನ್.ಎಲ್., ಕರ್ನಾಟಕದಲ್ಲಿ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಸಂಯುಕ್ತ ಕಮ್ಯುನಿಸ್ಟ್ ಪಕ್ಷದ ಅಧಿಕ ಸದಸ್ಯರನ್ನು ಒಯ್ದು ತಂದ

ಏಕೀಕರಣ ಚಳುವಳಿಯಲ್ಲಿ ನಮ್ಮ ಪಾತ್ರದ ಬಗ್ಗೆ ಎನ್. ಎಲ್.

ಹಿಂದೆ ಜವಾಬ್ದಾರಿ ಸರ್ಕಾರ ಚಳುವಳಿಯ ಹಾಗೆ, ರೈತ - ಕಾರ್ಮಿಕರನ್ನು ಏಕೀಕರಣ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡುವ ಮೂಲಕ ಹೊಸ ರೂಪ ಕೊಟ್ಟಂತಾಯಿತು. ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿ ದುಡಿಯುವ ವರ್ಗ ತನ್ನ ಪಾತ್ರವನ್ನು ನಿರ್ವಹಿಸಿದ್ದರಿಂದ ಬಲಗೊಂಡಿತು. ನಾವು ರೈತ ಕಾರ್ಮಿಕರ ಮುಂದೆ ಈ ಪ್ರಶ್ನೆ ಇಟ್ಟೆವು. ದುಡಿಯುವ ಜನರಿಗೆ ಏಕೀಕರಣ ಏಕೆ ಬೇಕು? ಬಾಂಬೆ ಕರ್ನಾಟಕದಲ್ಲಿ, ಮೈಸೂರು ಸಂಸ್ಥಾನದಲ್ಲಿ ಮದ್ರಾಸು ಮತ್ತು ಹೈದರಾಬಾದ್ ಕರ್ನಾಟಕಗಳಲ್ಲಿ ಬೇರೆ ಬೇರೆ ರೀತಿಯ ಒಕ್ಕಲುತನ ಕಾನೂನುಗಳು ಜಾರಿಯಲ್ಲಿವೆ. ಗೇಣಿದರ ಸಹ ಬೇರೆ ಬೇರೆಯಾಗಿದೆ. ಹೀಗಿರುವಾಗ ಕನ್ನಡ ಭಾಷೆ ಮಾತನಾಡುವ ರೈತರ ಐಕ್ಯ ಚಳುವಳಿ ನಡೆಸುವುದು ಹೇಗೆ? ಬೇಡಿಕೆಗಳಿಗೆ ಹೋರಾಟ ನಡೆಸುವುದು ಹೇಗೆ? ಕನ್ನಡ ಪ್ರದೇಶಗಳ ಏಕೀಕರಣದಿಂದ ಮಾತ್ರ ಇದು ಸಾಧ್ಯ. ಆಗ ಒಂದೇ ಥರದ ಒಕ್ಕಲುತನ ಕಾನೂನಿಗೆ ಪ್ರಬಲ ಒತ್ತಾಯ ತರಬಹುದು ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಸಹ ಕಾನೂನುಗಳಲ್ಲಿ ವಿಷಮತೆ ಇದೆ. ದುಡಿಯುವ ವರ್ಗದ ಹಿತಾಸಕ್ತಿಗಳ ರಕ್ಷಣೆಗೆ ಅಗತ್ಯವಾದ ಐಕ್ಯ ಪ್ರಬಲ ಸಂಘಟನೆ ಕಟ್ಟಲು ಏಕೀಕರಣದ ಅಗತ್ಯವನ್ನು ರೈತ - ಕಾರ್ಮಿಕರಿಗೆ ಮನವರಿಕೆ ಮಾಡಿಕೊಟ್ಟೆವು.



ಹೋರಾಟದಲ್ಲಿ ಎಂದೂ ಅಗಲದ ಸೋದರನ ಅಗಲಿಕೆಯಿಂದ ದುಃಖತಪ್ತರಾದ ಎನ್. ಕೆ.

ಕಾಮ್ರೇಡ್ ಎನ್.ಎಲ್. ಗೆ ಲಾಲ್ ಸಲಾಂ

ಅಂತಿಮ ಪಯಣ

★ಪುಟ 1ರಿಂದ

ಇನ್ನಿಲ್ಲ ಎಂಬ ನೋವಿಗೆ ಎಲ್ಲರೂ ಮರುದನಿ ನೀಡಿದರು.

ಮಲ್ಲೇಶ್ವರದ ನಿವಾಸದಿಂದ ಅಂತ್ಯ ಮೆರವಣಿಗೆ ಪ್ರಾರಂಭವಾಗುತ್ತಿದ್ದಂತೆಯೇ ಸಂಗಾತಿಗಳು ತಾವಾಗಿಯೇ ಸಾಲುಗಟ್ಟಿ ನಿಂತರು. ಮೆರವಣಿಗೆ ಉದ್ದಕ್ಕು ಬೆಳೆಯುತ್ತಲೇ ಹೋಯಿತು. ನೂರಾರು ಸಂಗಾತಿಗಳು ಭಾಗವಹಿಸಿದ್ದ ಮೆರವಣಿಗೆಯ ಕೊನೆಯಲ್ಲಿ ಆಟೋ ಸಂಗಾತಿಗಳು. ಹರಿಶ್ಚಂದ್ರ ಘಾಟ್ ರುದ್ರಭೂಮಿಯವರೆಗೆ ಬೆಂಗಳೂರಿನ ಬೀದಿಗಳಲ್ಲಿ ಶಿಸ್ತು ಬದ್ಧಾಗಿ ಸಾಗಿದ ಮೆರವಣಿಗೆ ಮತ್ತೆ ಕಮ್ಯುನಿಸ್ಟರ ಶಿಸ್ತನ್ನು ಎತ್ತಿ ತೋರಿಸುತ್ತಿತ್ತು.

ಮೆರವಣಿಗೆಯ ಮುಂಬಾಗದಲ್ಲಿ ಪಕ್ಷದ ಬಾವುಟವನ್ನು ಅರ್ಧಕ್ಕೆ ಬಾಗಿಸಿದ ಸಂಗಾತಿಗಳು ಹಿಂದೆ ಪಕ್ಷದ ರೆಡ್ ವಾಲಂಟಿಯರ್ಸ್ ಸಾಲು ಅದರ ಹಿಂದೆ ಪಕ್ಷದ ರಾಜ್ಯಕಾರ್ಯದರ್ಶಿ ಮಂಡಳಿಯ ಪಿ.ರಾಮಚಂದ್ರರಾವ್, ಎಸ್.ಸೂರ್ಯ ನಾರಾಯಣರಾವ್, ವಿ.ಜಿ.ಕೆ.ನಾಯರ್, ಸಿ.ನಂಜುಂಡಪ್ಪ ದುಃಖತಪ್ತ ಕುಟುಂಬದ ಸದಸ್ಯರು ಹಿಂದೆ ಎನ್.ಎಲ್. ದೇಹ ಹೊತ್ತ ಲಾರಿ. ಎನ್.ಎಲ್. ದೇಹದ ಮೇಲೆ ಪಕ್ಷದ ಬಾವುಟ. ಎಲ್ಲರ ಕಣ್ಣುಕುಕ್ಕುವಂತೆ ಎದ್ದುಕಂಡದ್ದು ಎನ್.ಎಲ್. ಬದುಕಿನುದ್ದಕ್ಕು ಅವರ ಸಂಗಾತಿಯಾಗಿದ್ದ ಕುಡುಗೋಲು ಸುತ್ತಿಗೆ. ಹೋರಾಟದ ವೀರನಿಗೆ ಹೋರಾಟದ ಚಿನ್ಹೆಗಳ ಕಂಕಣ. ದೇಹದ ಪಕ್ಕ ರೆಡ್ ವಾಲಂಟಿಯರ್ಸ್ ಹಿಂದೆ ಸಾಲು ಸಾಲು ಜನ.

ಹರಿಶ್ಚಂದ್ರ ಘಾಟ್‌ನವರೆಗೆ ಸಾಗಿದ ಜನ ಮತ್ತೆ ಅಲ್ಲಿದ್ದ ಸಂಗಾತಿಗಳ ಗುಂಪು ಜೊತೆಗೂಡಿದಾಗ ಎಲ್ಲರ ಎದೆಯಾಳದೊಳಗೆ ಎನ್.ಎಲ್. ಬಿಟ್ಟುಹೋದ ಹೋರಾಟದ ಪಲುಕುಗಳು.

ದೂರದಲ್ಲಿ ಕುಳಿತಿದ್ದ ಸಂಗಾತಿ ಅರಸು ಅವರೊಂದಿಗಿದ್ದ ಇತರೆ ಸಂಗಾತಿಗಳಿಗೆ ಚಿರಸ್ಮರಣೆಯ ಬಗ್ಗೆ ಹೇಳುತ್ತಿದ್ದ. ನಿರಂಜನರ ಚಿರಸ್ಮರಣೆ ಪುಟ ತಿರುವಿದರೆ ಮುನ್ನುಡಿಯಲ್ಲಿ ಉಪಾದ್ಯಾಯ ಸಹೋದರರ ಹೋರಾಟದ ನೆನಪುಗಳೇ ಹರಡಿಕೊಂಡಿವೆ. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳವಳಿಯನ್ನು ಸಂಘಟಿಸಲು ಪಕ್ಷದ ಕೇಂದ್ರ ಸಮಿತಿ ಅವರನ್ನು ಮುಂಬೈನಿಂದ ಕರ್ನಾಟಕಕ್ಕೆ ಕಳಿಸಿತು. ಅರಸು ವಿವರಸುತ್ತಲೇ ಇದ್ದ. ಅಲ್ಲಲ್ಲಿ ಗುಂಪುಗೂಡಿದ್ದ ಸಂಗಾತಿಗಳು ಅಂತೆಯೇ ಎನ್.ಎಲ್. ಜೀವನದ ಹಲವು ಪುಟಗಳನ್ನು ಬಿಚ್ಚಿಡುತ್ತಿದ್ದರು. ದೂರದಲ್ಲಿ ಎನ್.ಎಲ್. ಹೋರಾಟದ ಜೊತೆಗೇ ಬೆಳೆದ ಮತ್ತೊಬ್ಬ ಹಿರಿಯ ಸಂಗಾತಿ ಕಾಂಮ್ರೇಡ್ ಎನ್.ಕೆ. ಉಪಾಧ್ಯಾಯ ಬಿಕ್ಕುತ್ತಿದ್ದರು.

ಎನ್.ಎಲ್. ಇನ್ನಿಲ್ಲ. ಸರಳಜೀವಿ, ಮೃದು ಹೃದಯದ ಎನ್.ಎಲ್. ತನ್ನ ಕೊನೆಯುಸಿರಿನವರೆಗೂ ಮಾರ್ಕ್ಸ್‌ವಾದ-ಲೆನಿನ್‌ವಾದದ ಪ್ರಚಾರಕ್ಕೆ ಶ್ರಮಿಸಿದರು. ಕಾ॥ ಸೂರಿಯವರ ಶ್ರದ್ಧಾಂಜಲಿಯೊಂದಿಗೆ ಸಂತಾಪ ಸಭೆ ಆರಂಭ.

ಕಾಂಮ್ರೇಡ್ ಸಿ.ನಂಜುಂಡಪ್ಪ ದೇಶದ ವಿವಿಧೆಡೆಗಳಿಂದ ಸಂಗಾತಿಗಳು ಎನ್.ಎಲ್. ಉಪಾದ್ಯಾಯರ ಮರಣಕ್ಕೆ ಸಂತಾಪ ವ್ಯಕ್ತಪಡಿಸಿ ಕಳಿಸಿದ ತಂತಿಗಳನ್ನು ದುಃಖತಪ್ತ ಸಂಗಾತಿಗಳಿದುರು ಓದುತ್ತಿದ್ದರು. ಕಾಂಮ್ರೇಡ್ ಇ.ಎಂ.ಎಸ್, ಕಾಮ್ರೇಡ್ ಬಿ.ಟಿ. ರಣದಿವೆ, ಕೇರಳದ ಮುಖ್ಯಮಂತ್ರಿ ಇ.ಕೆ. ನಯನಾರ್, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕೇರಳ ರಾಜ್ಯ ಕಾರ್ಯದರ್ಶಿ ಅಚ್ಯುತಾನಂದನ್ ಮಂಗಳೂರಿನಿಂದ ಭಾರತ ಕಮ್ಯೂನಿಸ್ಟ್ ಪಕ್ಷದ ಬಿ.ವಿ. ಕಕ್ಕಿಲ್ಲಾಯ, ಸಿ.ಪಿ.ಐ(ಎಂ) ಬಂಗಾರ ಪೇಟೆ ತಾಲ್ಲೂಕಿನ ಜಯರಾಂ ದುಃಖವ್ಯಕ್ತ ಪಡಿಸಿ ತಂತಿ ಕಳಿಸಿದ್ದರು.


ನನ್ನನ್ನು ಕಮ್ಯೂನಿಸ್ಟ್ ಪಕ್ಷದತ್ತ ಆಕರ್ಷಿಸಿ ಕಮ್ಯೂನಿಸ್ಟ್ ಪಕ್ಷದ ಸದಸ್ಯತ್ವ ನೀಡಿದವರು ಕಾಮ್ರೇಡ್ ಎನ್.ಎಲ್. ಎಂದ ಭಾರತ ಕಮ್ಯೂನಿಸ್ಟ್‌ಪಕ್ಷದ ರಾಜ್ಯ ಕಾರ್ಯದರ್ಶಿ ಎಂ.ಎಸ್. ಕೃಷ್ಣನ್, ಎನ್.ಎಲ್. ಅವರೊಡನೆ ತಮ್ಮ ಒಡನಾಟದ ನೆನಪುಗಳನ್ನು ಹರಡುತ್ತಿದ್ದರು. 1948 ರಿಂದ 51 ರವರೆಗೆ ಎನ್.ಎಲ್. ಹಾಗೂ ಎಂ.ಎಸ್.ಕೃಷ್ಣನ್ ಭೂಗತರಾಗಿದ್ದಾಗ ನಡೆದ ಹಲವು ಘಟನೆಗಳನ್ನು ವಿವರಿಸಿದರು.

ಸಿ.ಪಿ.ಐ(ಎಂ) ತಮಿಳುನಾಡು ಘಟಕದ ಪರವಾಗಿ ಹರಿದಾಸ್‌ಭಟ್ ಮಾತನಾಡಿ ಇಂದಿನ ಹಲವರಿಗೆ ಆರಂಭದಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿದ ಶ್ರಮ ಅರಿವಿರಲಿಕ್ಕಿಲ್ಲ. ಅಂತಹ ಸಂದರ್ಭದಲ್ಲಿ ಕಮ್ಯೂನಿಸ್ಟ್ ಬಾವುಟವನ್ನು ಎತ್ತಿ ಹಿಡಿದ ಎನ್.ಎಲ್.ರವರಿಗೆ ತಮಿಳುನಾಡು ಘಟಕದ ಪರವಾಗಿ ಕೆಂಪುವಂದನೆ ಸಲ್ಲಿಸುತ್ತೇನೆ ಎಂದರು.

ಸಂತಾಪ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾಂ.ಪಿ.ರಾಮಚಂದ್ರರಾವ್ ಆರಂಭದ ದಿನದಲ್ಲಿ ಕಮ್ಯೂನಿಸ್ಟ್ ಬಾವುಟ ಎತ್ತಿ ಹಿಡಿಯುವ ಸಾಹಸ ಅತ್ಯಂತ ಸ್ಮರಣೀಯ, ಅಂತಹ ದಿನಗಳಲ್ಲಿ ಕಮ್ಯುನಿಸ್ಟ್ ಚಳವಳಿಯನ್ನು ಸಂಘಟಿಸಿ ಎನ್.ಎಲ್. ಕೊಡುಗೆ ಅಪಾರವಾದದ್ದು. ಹತ್ತು ವರುಷದಿಂದ ಕಾಯಿಲೆಯಿಂದಾಗಿ ಬಳಲುತ್ತಿದ್ದ ಎನ್.ಎಲ್.ಗೆ ಆ ಕಾಯಿಲೆಯ ಮಧ್ಯೆಯೂ ಉತ್ಸಾಹ ಚಿಮ್ಮುತ್ತಿತ್ತು. ಎಡಪಕ್ಷಗಳು ರಾಷ್ಟ್ರ ರಾಜಕೀಯದಲ್ಲಿ ಪ್ರಮುಖ ವಾಹಿನಿಯಾಗುತ್ತಿದ್ದಾಗ ಅದರೊಡನೆ ತಾನಿರಬೇಕು ಎಂದು ಬಯಸುತ್ತಿದ್ದರು. ಅವರು ಎಲ್ಲ ಅರ್ಥಗಳಲ್ಲೂ ನಮ್ಮ 'ಗೆಳೆಯ' ರಾಗಿದ್ದರು ಅಪಾರ ತಾಳ್ಮೆಯ ಹಿರಿಯರಾಗಿದ್ದರು. ಭಾಷೆಗಳ ಮೂಲಕ ವಿಚ್ಛಿದ್ರಕಾರಿ ಶಕ್ತಿಗಳು ದೇಶ ಒಡೆಯುತ್ತಿರುವ ಸಮಯದಲ್ಲಿ ದೇಶದಲ್ಲಿ ಕಮ್ಯೂನಿಸ್ಟ್ ಚಳವಳಿಯನ್ನು ಎನ್.ಎಲ್. ಹೋರಾಟವನ್ನು ಸ್ಮರಿಸುತ್ತಾ ಬಲವಾಗಿ ಮಾಡಿಸೋಣ ಎಂದರು.

ಉಪಾದ್ಯಾಯರ ದೇಹಕ್ಕೆ ಬೆಂಕಿ ತಗುಲಿಸು ತ್ತಿದ್ದಂತೆಯೇ ಮತ್ತೊಮ್ಮೆ ದುಃಖತಪ್ತ ಕಂಠಗಳು ಎನ್.ಎಲ್. ಅಮರ್ ರಹೇ, ಕಾಂಮ್ರೇಡ್ ಎನ್.ಎಲ್.ಗೆ ಕೆಂಪುವಂದನೆ ಕೂಗುತ್ತಿದ್ದರು. ಎನ್.ಎಲ್. ಕಮ್ಯುನಿಸ್ಟ್ ಹೋರಾಟದ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 'ಚಿರಸ್ಮರಣೆ'ಯ ಪುಟಗಳಲ್ಲಿ ಅಮರರಾದರು.

★ ★ ★ ★ ★





ಪಕ್ಷದ ಪತ್ರಿಕೆ ಬಗ್ಗೆ ಎನ್.ಎಲ್.

ಪತ್ರಿಕೆ ಆಗಿನ ಪರಿಸ್ಥಿತಿಗೂ, ಈಗಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಆಗ ಎಲ್ಲ ಜನ ವಿಭಾಗಗಳ ಸಾಮಾನ್ಯ ಸಮಸ್ಯೆ ಬಗ್ಗೆ ಭಾರಿ ಹೋರಾಟ ನಡೆಯುತ್ತಿದ್ದ ಕಾಲ. ಮೊದಲು ಸ್ವಾತಂತ್ರ್ಯ ಚಳುವಳಿ, ಜವಾಬ್ದಾರಿ ಸರ್ಕಾರಕ್ಕೆ ಚಳುವಳಿ. ಆ ಮೇಲೆ ಏಕೀಕರಣ ಚಳುವಳಿ ಆಗ ಇಂತಹ ಸಮಸ್ಯೆಗಳ ಬಗ್ಗೆ ಬರೆಯುತ್ತಿದ್ದುದರಿಂದ ಮತ್ತು ನಿರಂಜನರಂತಹ ಸಾಹಿತಿಗಳ ಪ್ರಖರ ಬರವಣಿಗೆಯಿಂದಾಗಿ ಬಹಳ ಬೇಗ 'ಜನಶಕ್ತಿಯ' ಪ್ರಸಾರ ಏರಿತು. 2000 ದಿಂದ ಆರಂಭವಾಗಿ ಸುಮಾರು 5000 ಕ್ಕೇರಿತ್ತು. ಇನ್ನೊಂದು ಮುಖ್ಯ ವಿಷಯ ವೆಂದರೆ ಈ ಪತ್ರಿಕೆ ಪಕ್ಷದ ಸದಸ್ಯತ್ವವನ್ನು ಮೀರಿ ದುಡಿಯುವ, ಮಧ್ಯಮ ವರ್ಗಗಳ ಜನ ಸಮೂಹವನ್ನು ಮುಟ್ಟಿತು. ಆಗ ಪಕ್ಷದ ಸದಸ್ಯತ್ವ ಇದ್ದುದು ಕಡಿಮೆ. ಮುಖ ಪತ್ರಿಕೆ ಮಾರಾಟ ಮಾಡುವುದು ಪಕ್ಷದ ಸದಸ್ಯರ ಮುಖ್ಯ ಕರ್ತವ್ಯಗಳಲ್ಲೊಂದಾಗಿತ್ತು. ನಾವೆಲ್ಲರೂ 30 - 40 ಪತ್ರಿಕೆಗಳನ್ನು ಕೈಗೆ ಸುತ್ತಿಕೊಂಡು ಪ್ರತಿವಾರ ಬಳೇಪೇಟೆಯಲ್ಲಿ 'ಜನಶಕ್ತಿ' 'ಜನಶಕ್ತಿ' ಅಂತ ಕೂಗುತ್ತ ಮಾರುತ್ತಿದ್ದೆವು. ಇದೇ ರೀತಿ ಕೇಂದ್ರ ಮುಖ ಪತ್ರಿಕೆಯನ್ನು ಸಹ ಹೋಗು ಬರುವ ಜನ, ಅಂಗಡಿಯವರುಕೊಂಡುಕೊಳ್ಳುತ್ತಿದ್ದರು.

ಇಂದಿನ ಬದಲಾದ ಪರಿಸ್ಥಿತಿಯಲ್ಲಿ, ಪಕ್ಷದ ಎಲ್ಲ ದುಡಿಯುವ ಜನರನ್ನು ಮುಟ್ಟುವ ರೀತಿಯಲ್ಲಿ, ಪತ್ರಿಕೆಯ ಸ್ವರೂಪವನ್ನೂ (ವಿಷಯ, ಬರೆಯುವ ರೀತಿ ಭಾಷೆ ಇತ್ಯಾದಿ) ಮಾರಾಟ ಮಾಡುವ ಉಪಾಯಗಳನ್ನು ಹಾಕಿಕೊಳ್ಳಬೇಕು. ಪ್ರತಿಯೊಬ್ಬ ಸದಸ್ಯನೂ ಇದರಲ್ಲಿ ಆಸಕ್ತಿ ವಹಿಸಬೇಕು.

ಎನ್.ಎಲ್.



ಕೆಂಪು ಪಕಳೆಗಳಿಗೆ
ಹಾಡು ಹೇಳಿದ ಗೇಣಿಕಾರ
ನೂರು ನೋವಿಗೆ ಅನುದಿನದ
ಚೈತನ್ಯದ ಸ್ಪರ್ಶ
ಹಾಡು ಚಿಮ್ಮುವ ಹೂವು
ಮಾವು ಜೊಂಪು
ಎದೆ ಕತ್ತಲಿಗೆ
ಬೆಳಕ ದೊಂದಿ ಹಿಡಿದ
ಹಲವು ಸಂಗಾತಿಗಳ ಕಣ್ಣೊಳಗೆ
ಕುಳಿ ಮಿಣಿ ಮಿಣಿ ದೀಪ
ಹಾಡ ಕೊನೆಗೆ ತೂಗುವ
ಯುಗಾದಿ
ಮಿಂಚುಗೊಂಚಲು
ಅರಳುವ ಚಿಮ್ಮುವ ಹಲವು
ಪಕಳೆಗಳ ಮಧ್ಯೆ
ಇನ್ನಿಲ್ಲವಾದ ಹಾಡು

— ಜೆ.ಎನ್. ಮೋಹನ್

ಸಂದೇಶಗಳು

ಕಾಮ್ರೇಡ್ ಉಪಾಧ್ಯಾಯರು ತೀರಿಕೊಂಡದ್ದರಿಂದ ಆಳವಾದ ದುಃಖವುಂಟಾಗಿದೆ. ಅವರೊಬ್ಬ ಸಮರ್ಪಿತ ಕಮ್ಯೂನಿಸ್ಟ್‌ರಾಗಿದ್ದರು. ಅವರ ಕುಟುಂಬದ ಸದಸ್ಯರಿಗೆ ಪಾಲಿಟ್‌ಬ್ಯೂರೋದ ಹಾರ್ದಿಕ ಸಂತಾಪಗಳನ್ನು ತಿಳಿಸಿ.

— ಇ.ಎಂ.ಎಸ್. ನಂಬೂದರಿ ಪ್ಪಾಡ್.

ಕಾಮ್ರೇಡ್ ಉಪಾಧ್ಯಾಯರ ನಿಧನ ಆಘಾತವುಂಟುಮಾಡಿದೆ. ಅವರದ್ದು ಕಾರ್ಮಿಕ ವರ್ಗದ ಸೇವೆಮಾಡಿದ ಜೀವನ. ಕುಟುಂಬದ ಸದಸ್ಯರಿಗೆ ನನ್ನ ಸಂತಾಪಗಳನ್ನು ತಿಳಿಸಿ.

— ಬಿ.ಟಿ.ರಣದಿವೆ.

ಕಾಮ್ರೇಡ್ ಎನ್.ಎಲ್. ಉಪಾಧ್ಯಾಯರ ಆಕಸ್ಮಿಕ ನಿಧನದ ಸುದ್ದಿಕೇಳಿ ಆಘಾತವಾಯಿತು. ಅವರ ನಿಧನ ಕರ್ನಾಟಕದಲ್ಲಿ ಸಿ.ಪಿ.ಐ.(ಎಂ) ಮತ್ತು ಕಾರ್ಮಿಕ ಆಂದೋಲನಕ್ಕೊಂದು ತುಂಬಲಾರದ ನಷ್ಟ. ಅವರ ಕುಟುಂಬದ ಸದಸ್ಯರಿಗೆ ಮತ್ತು ಕರ್ನಾಟಕ ರಾಜ್ಯ ಸಮಿತಿಗೆ ಕೇರಳ ರಾಜ್ಯ ಸಮಿತಿಯ ಸಂತಾಪಗಳು.

— ವಿ.ಎಸ್. ಅಚ್ಯುತಾನಂದನ್
ಕಾರ್ಯದರ್ಶಿ, ಸಿ.ಪಿ.ಐ(ಎಂ) ಕೇರಳ ರಾಜ್ಯ ಸಮಿತಿ.

ಕಾಮ್ರೇಡ್ ಎನ್.ಎಲ್. ಉಪಾಧ್ಯಾಯರ ನಿಧನದಿಂದ ದುಃಖತಪ್ತ ಕುಟುಂಬದ ಸದಸ್ಯರಿಗೆ ಮತ್ತು ಸಂಗಾತಿಗಳಿಗೆ ನನ್ನ ಹಾರ್ದಿಕ ಸಂತಾಪಗಳು.

— ಇ.ಕೆ. ನಾಯನಾರ್
ಮುಖ್ಯ ಮಂತ್ರಿ,ಕೇರಳ ರಾಜ್ಯ

ಉಪಾಧ್ಯಾಯರ ನಿಧನದ ಬಗ್ಗೆ ಆಳವಾದ ಸಂತಾಪ.

— ಎನ್. ಪ್ರಸಾದರಾವ್,
ಆಂಧ್ರ ಪ್ರದೇಶ ರಾಜ್ಯ ಸಮಿತಿ

ಕಾಮ್ರೇಡ್ ಎನ್.ಎಲ್. ಉಪಾಧ್ಯಾಯರ ನಿಧನಕ್ಕೆ ಹಾರ್ದಿಕ ಸಂತಾಪಗಳು ಕುಟುಂಬದ ಸದಸ್ಯರಿಗೆ ಸಂತಾಪ ತಿಳಿಸಿ.

— ಬಿ.ವಿ. ಕಕ್ಕಿಲ್ಲಾಯ
ಮಂಗಳೂರು.

ಕಾಮ್ರೇಡ್ ಎನ್.ಎಲ್. ಗೆ ಲಾಲ್ ಸಲಾಂ

ಸಿ.ಪಿ.ಐ.ನ ಹದಿನಾಲ್ಕನೇ ಮಹಾಧಿವೇಶನ - ಒಂದು ವೀಕ್ಷಣೆ

ಇತ್ತೀಚೆಗೆ ಕಲ್ಕತ್ತೆಯಲ್ಲಿ ಜರುಗಿದ ಸಿ.ಪಿ.ಐ.ನ 14ನೇ ಮಹಾಧಿವೇಶನದ ರಾಜಕೀಯ ನಿರ್ಣಯ ರಾಜೀವಗಾಂಧಿ ಸರ್ಕಾರವನ್ನು ಕಿತ್ತೊಗೆಯುವುದು, ಕೋಮುವಾದಿ ಛಿದ್ರಕಾರಿ ಶಕ್ತಿಗಳನ್ನು ಸೋಲಿಸುವುದು, ಎಡ ಐಕ್ಯತೆಯನ್ನು ಬಲಪಡಿಸುವುದು ಪ್ರಮುಖ ಕರ್ತವ್ಯಗಳೆಂದು ಘೋಷಿಸಿದೆ. ಬರಲಿರುವ ಕಾಲಘಟ್ಟಕ್ಕೆ ಕಾರ್ಯತಂತ್ರ ರೂಪಿಸುವಲ್ಲಿ ಅದರ ರಾಜಕೀಯ ನಿರ್ಣಯ ಅನುಸರಿಸಿರುವ ದಿಕ್ಕು ಇತ್ತೀಚೆಗೆ ಸಿ.ಪಿ.ಐ(ಎಂ) ತಿರುವನಂತಪುರದಲ್ಲಿ ತನ್ನ 13 ನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ ನಿರ್ಣಯದ ದಿಕ್ಕು ಒಂದೇ ಆಗಿದೆ........

ಆದರೆ ಪಕ್ಷದ ಕಾರ್ಯಕ್ರಮದ ಬಗ್ಗೆ ಅಂತಿಮ ನಿರ್ಧಾರಕ್ಕೆ ಬರಲಾಗದಿರುವುದು ದುರದೃಷ್ಟಕರ. ಸಮಯ ಇಲ್ಲವೆಂದು ಅದನ್ನು ಮುಂದೂಡಿರುವುದು ಆಶ್ಚರ್ಯಕರ. ಅದುವರೆಗೆ ಹಳೆಯ ಕಾರ್ಯಕ್ರಮಕ್ಕೆ ಬದ್ಧವಾಗಿರಲು ತೆಗೆದು ಕೊಂಡ ನಿರ್ಧಾರ ಇನ್ನೂ ವಿಚಿತ್ರ. ತಿದ್ದುಪಡಿ ಅಗತ್ಯವೆಂದು ಕಂಡುಬಂದಿರುವ ಕಾರ್ಯಕ್ರಮದ ಆಧಾರದ ಮೇಲೆ ಸರಿಯಾದ ರಾಜಕೀಯ ದಿಕ್ಕಿನ ನಿರ್ಧಾರ ಹೇಗೆ ಸಾಧ್ಯ?.......

ಸಿ.ಪಿ.ಐ.ನ ಹದಿನಾಲ್ಕನೇ ಮಹಾಧಿವೇಶನದ ಒಂದು ವಿಶ್ಲೇಷಣೆಯನ್ನು ಕಾಂ. ಹರಕಿಶನ್‌ಸಿಂಗ್ ಸುರ್ಜಿತ್ ಇಲ್ಲಿ ನೀಡಿದ್ದಾರೆ.

ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯ ಐಕ್ಯತೆಯ ಬಗೆಗಿನ ವಾದ-ವಿವಾದದಲ್ಲಿ ಭಾಗವಹಿಸುತ್ತಾ ಈಗಾಗಲೇ ನಾವು ಹಲವು ಬಾರಿ ಕಾರ್ಯಕ್ರಮದಲ್ಲಿ ಮೂಲಭೂತ ಭಿನ್ನತೆಗಳನ್ನು ಗಮನಿಸದೇನೇ ತತ್‌ಕ್ಷಣ ವಿಲೀನವಾಗಬೇಕೆಂಬ ವಾದವನ್ನು ವಿರೋಧಿಸಿದ್ದೇವೆ. ಹಿಂದೆ ಸಿ.ಪಿ.ಐ ನಾಯಕರು ಇಂತಹ ವಾದವನ್ನು ಪದೇ ಪದೇ ಮುಂದಿಟ್ಟಿದ್ದು, ಈಗ ಅವರೂ ನಮ್ಮ ತೀರ್ಮಾನಕ್ಕೆ ಬಂದಂತಿದೆ. ಸಿ.ಪಿ.ಐ ಪ್ರಧಾನ ಕಾರ್ಯದರ್ಶಿ ಕಾ॥ ರಾಜೇಶ್ವರ ರಾವ್ 'ಲಿಂಕ್' ಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ, ಕಮ್ಯುನಿಸ್ಟ್ ಪಕ್ಷಗಳ ಕಾರ್ಯಕ್ರಮಕ್ಕೆ ತಿದ್ದುಪಡಿ ಮಾಡಬೇಕೆಂದು ನಿರ್ಧರಿಸಿತ್ತು. ಇದಕ್ಕಾಗಿ ಒಂದು ಕಮಿಶನನ್ನು ಸಹ ನೇಮಿಸಲಾಗಿತ್ತು. ಈ ಮಹಾಧಿವೇಶನದ ಕಾರ್ಯಕ್ರಮ ಪಟ್ಟಿಯಲ್ಲಿ ಇದು ಮಹತ್ವದ್ದಾಗಿತ್ತು. ಪಕ್ಷದೊಳಗಿನ ಚರ್ಚೆಗೆ ಸಾಕಷ್ಟು ಸಮಯ ಇಲ್ಲವೆಂದು ಇದನ್ನು ಮುಂದಕ್ಕೆ ಹಾಕಿದ್ದು ಆಶ್ಚರ್ಯಕರ. ಹಳೆಯ ಕಾರ್ಯಕ್ರಮಕ್ಕೆ ಬದ್ಧವಾಗಿರಲು ತೆಗೆದುಕೊಂಡ ನಿರ್ಧಾರ ಇನ್ನೂ ವಿಚಿತ್ರ. ತಿದ್ದುಪಡಿ ಅಗತ್ಯವಿದೆಯೆಂದು ಕಂಡು ಬಂದಿರುವ ಕಾರ್ಯಕ್ರಮದ ಆಧಾರದ ಮೇಲೆ ಪ್ರಮುಖ ಭಿನ್ನಾಭಿಪ್ರಾಯಗಳು.

ಸಿ.ಪಿ.ಐ. ಪತ್ರಿಕೆಗಳಾದ 'ಪಾರ್ಟಿ ಲೈಫ್' ಮತ್ತು 'ನ್ಯೂ ಏಜ್' ವರದಿ ಮಾಡಿದಂತೆ ಕಾರ್ಯಕ್ರಮದ ಮೇಲಿನ ಚರ್ಚೆಯಲ್ಲಿ ಹಲವು ಸಂಗಾತಿಗಳು, ಪ್ರಭುತ್ವದ ವರ್ಗ ಸ್ವಭಾವದ ಬಗ್ಗೆ ಮತ್ತು ವರ್ಗ ಮೈತ್ರಿಯಲ್ಲಿ ವಿವಿಧ ವರ್ಗಗಳ ಪಾತ್ರಗಳ ಬಗ್ಗೆ ಪಕ್ಷದ ತಿಳುವಳಿಕೆ ತಪ್ಪೆಂದು ಒಪ್ಪಿಕೊಂಡಿದ್ದಾರೆ. ಆದರೆ ಅವರು ಸಿ.ಪಿ.ಐ(ಎಂ) ನ ಕಾರ್ಯಕ್ರಮದಲ್ಲೂ ತಪ್ಪುಗಳಿವೆಯೆಂದು ವಿವರಿಸಲು ಪ್ರಯತ್ನಿಸಿದ್ದಾರೆ. ಸಿ.ಪಿ.ಐನ ಕಾರ್ಯಕ್ರಮ ಸಮಯದ ಪರೀಕ್ಷೆಯಲ್ಲಿ ಕೊಟ್ಟಿದೆ. ಆದ್ದರಿಂದ ಭಾರತದಲ್ಲಿ 'ರಾಷ್ಟ್ರೀಯ ಪ್ರಜಾಪ್ರಭುತ್ವ' ಮತ್ತು 'ಬಂಡವಾಳಶಾಹಿಯಲ್ಲದ ಪಥ'ದ ಪರಿಕಲ್ಪನೆಗಳು ಅನ್ವಯವಾಗುವುದಿಲ್ಲ. ಭಾರತದ ಕ್ರಾಂತಿ ಕಾರ್ಮಿಕ ವರ್ಗದ ನಾಯಕತ್ವದಲ್ಲಿ, ಕಾರ್ಮಿಕವರ್ಗ, ರೈತಾಪಿ ವರ್ಗ, ಪುಟ್ಟ ಬೂರ್ಜ್ವಾ ಮತ್ತು ಗುತ್ತೇದಾರಿಯಲ್ಲದ ಬೂರ್ಜ್ವಾ ವರ್ಗವಿಭಾಗಗಳ ಮೈತ್ರಿಕೂಟ ಮಾತ್ರ ನಡೆಸಲು ಸಾಧ್ಯ.

ನಮ್ಮ ಕಾರ್ಯಕ್ರಮದಲ್ಲಿ "ಜನತಾ ಪ್ರಜಾಪ್ರಭುತ್ವ" ಪಾಳೆಯಗಾರಿ-ವಿರೋಧಿ, ಸಾಮ್ರಾಜ್ಯಶಾಹಿ -ವಿರೋಧಿ, ಗುತ್ತೇದಾರಿ-ವಿರೋಧಿ ಕೆಲಸಗಳನ್ನು ಮುಗಿಸುವ ಗುರಿ ಹೊಂದಿದೆ. ಯಾರಿಗಾದರೂ ಈ ಕಾರ್ಯಕ್ರಮದ ಬಗ್ಗೆ ಸಂಶಯವಿದೆಯೇ? ಕಾರ್ಯಕ್ರಮದ ಉಳಿದ ಭಾಗಗಳಲ್ಲಿ ವಿವರಿಸುತ್ತಾ ಬಂದಿರುವ ಸಾಮಾಜಿಕ-ಆರ್ಥಿಕ ಬೆಳವಣಿಗೆಗಳು, ಸರ್ಕಾರದ ನೀತಿಗಳಲ್ಲಿ ಈಗ ಬದಲಾವಣೆ ಆಗಿದೆ ಎಂದು ಹೇಳಿ ಕಾರ್ಯಕ್ರಮ ಕಾಲದೊಂದಿಗೆ ಹೊಂದಿಕೊಂಡಿಲ್ಲ ಎನ್ನುವುದು ಮೂರ್ಖತನ. ಕಾರ್ಯಕ್ರಮ ಎಲ್ಲಾ ಸಣ್ಣ ಬದಲಾವಣೆಗಳನ್ನು ಒಳಗೊಳ್ಳುತ್ತಾ ಹೋಗುವುದು ಸಾಧ್ಯವಿಲ್ಲ. ಆದರೆ ಮೇಲೆ ಹೇಳಿದ ಪ್ರಮುಖ ನಿರ್ಧಾರಗಳು, ನಿರ್ವಚನೆಗಳು ಈಗಲೂ ಸರಿಯಾಗಿ ಇವೆಯೆ ಎಂಬುದು ಪ್ರಶ್ನೆ. ಸರಿಯಾಗಿವೆ ಎಂದು ನಮ್ಮ ಅಭಿಪ್ರಾಯ. ಇದನ್ನು ಯಾರೂ ಪ್ರಶ್ನಿಸಿಲ್ಲ ಕೂಡ.

ಆದರೆ ಸಿ.ಪಿ.ಐ ಕಾರ್ಯಕ್ರಮದಲ್ಲಿ ನಾವು ಟೀಕಿಸುವುದು. ಇಂತಹ ಸಣ್ಣ ಪುಟ್ಟ ಬೆಳವಣಿಗೆಗಳನ್ನಲ್ಲ, ಪ್ರಮುಖ ನಿರ್ವಚನೆಗಳನ್ನು. ಪ್ರಭುತ್ವದ ವರ್ಗ ಸ್ವಭಾವ, 'ಬಂಡವಾಳಶಾಹಿಯಲ್ಲದ ಪಥ, ಮತ್ತು ರಾಷ್ಟ್ರೀಯ ಪ್ರಜಾಪ್ರಭುತ್ವದ' ಪರಿಕಲ್ಪನೆಗಳು, ಮತ್ತು ಕ್ರಾಂತಿಯಲ್ಲಿ ವಿವಿಧ ವರ್ಗಗಳ ಪಾತ್ರ ಇವೇ ಮುಂತಾದ ವಿಚಾರಗಳ ಬಗ್ಗೆ ಸಿ.ಪಿ.ಐ ಯೊಳಗೆ ಚರ್ಚೆ ನಡೆದಿದೆ, ಭಿನ್ನಾಭಿಪ್ರಾಯಗಳಿವೆ. ಇದನ್ನು ತಿರುವನಂತಪುರ ನಿರ್ಣಯಕ್ಕೆ ಅನುಗುಣವಾಗಿಯೇ ಇದೆ. ಇದು ಎರಡು ಪಕ್ಷಗಳ ನಡುವೆ ಹೆಚ್ಚಿನ ಸಹಕಾರಕ್ಕೆ ಅನುವು ಮಾಡಿಕೊಡುತ್ತದೆ.

ಚುನಾವಣೆಯ ಬದಲಿ ಮತ್ತು ನಿಜವಾದ ಬದಲಿ

ಆದರೆ ಸಿ.ಪಿ.ಐ ನಿರ್ಣಯ ರಾಜೀವ ಗಾಂಧಿ ಸರ್ಕಾರವನ್ನು ಕಿತ್ತೊಗೆಯುವ ಘೋಷಣೆಗೆ ಸಂಬಂಧಿಸಿದಂತೆ ಹಲವು ವಿಷಯಗಳ ಬಗ್ಗೆ ಅಸ್ಪಷ್ಟವಿದೆ. ರಾಜೀವ ಸರ್ಕಾರಕ್ಕೆ ಪರ್ಯಾಯಕ್ಕೆ ಸಂಬಂಧ ಪಟ್ಟಂತೆ ಸಹ ಇದನ್ನೇ ಹೇಳಬಹುದು. ನಿಜವಾದ ಬದಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯಿಂದ ಮಾತ್ರವೇ ಸಾಧ್ಯ. ಇಂತಹ ಬದಲಿಯನ್ನು ನಾವು ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಮುಂದಿಡುವುದು ಸಾಧ್ಯವಾಗಿದೆ. ಈ ಬದಲಿ, ಬದಲಿ ಕಾರ್ಯಕ್ರಮದ ಮೇಲೆ ಆಧರಿಸಿದ್ದು. ರಾಷ್ಟ್ರೀಯ ಮಟ್ಟದಲ್ಲಿ ಇಂತಹ ಬದಲಿಯನ್ನು ಮುಂದಿಡುವ ಮಟ್ಟದಲ್ಲಿ ಇಂದು ನಾವಿಲ್ಲ, ಇಂತಹ ಬದಲಿ ಹೋರಾಟದ ಮೂಲಕ ಮೂಡಿ ಬರಬೇಕಾಗಿದೆ.

ದೇಶದಲ್ಲಿ ರಾಜೀವ ಸರ್ಕಾರವನ್ನು ಕಿತ್ತೊಗೆಯ ಬೇಕೆಂದು ಹಲವು ಕಾರಣಗಳಿಂದ ಜನ ನಿರ್ಧರಿಸಿದ್ದಾರೆ ಮತ್ತು ಚುನಾವಣೆ ಸಮೀಪಿಸುತ್ತಿದ್ದಂತೆ ಇದು ರಾಜಕೀಯ ಕಾರ್ಯಕ್ರಮದ ಮುಖ್ಯ ಪ್ರಶ್ನೆಯಾಗುತ್ತಿದೆ. ಇದಕ್ಕಾಗಿ ನಾವೊಂದು ಕಾರ್ಯ ತಂತ್ರ ನಿರೂಪಿಸಿದ್ದೇವೆ. ಇದು ನಿಜವಾದ ಬದಲಿ ಮುಂದಿಡುವುದಲ್ಲ. ಚುನಾವಣಾ ಬದಲಿ. ಕೋಮುವಾದಿ ಶಕ್ತಿಗಳನ್ನು ಬದಿಗೊತ್ತಿ ಎಡ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳನ್ನು ಐಕ್ಯಗೊಳಿಸಲು ನೆರವಾಗುತ್ತದೆ. ಆದರೆ ಈ ಚುನಾವಣಾ ಬದಲಿ ನಿಜವಾದ

ಸರಿಹಾದಿಯಲ್ಲಿರುವ ನಿರ್ಣಯ ...

ವಿಲೀನ ಸಾಧ್ಯತೆ ಸದ್ಯಕ್ಕಿಲ್ಲ ಎಂದಿದ್ದಾರೆ. ಎಡ ಐಕ್ಯ ಕಾರ್ಯಾಚರಣೆಯನ್ನು ಕಟ್ಟುವ, ಬೆಳೆಸುವತ್ತ ಹೆಚ್ಚಿನ ಒತ್ತು ಕೊಟ್ಟಿದ್ದಾರೆ.

ಕಾರ್ಯಕ್ರಮ ತಿದ್ದುಪಡಿಗೆ ಹಿಂದೇಟು

ಸಿ.ಪಿ.ಐ. ಪಕ್ಷದ ಮಹಾಧಿವೇಶನದಲ್ಲಿ ಪಕ್ಷದ ಕಾರ್ಯಕ್ರಮದ ಬಗ್ಗೆ ಒಂದು ಕೊನೆಯ ನಿರ್ಧಾರಕ್ಕೆ ಬರುವುದು ಸಾಧ್ಯವಾಗಲಿಲ್ಲ ವೆಂಬುದು ದುರದೃಷ್ಟಕರ. ಅದು ಒಂದು ಸಂಕ್ಷಿಪ್ತ ನಿರ್ಣಯ ಮಂಜೂರು ಮಾಡುವಷ್ಟಕ್ಕೆ ತೃಪ್ತಿ ಪಟ್ಟು ಕೊಳ್ಳಬೇಕಾಯಿತು. (ನಿರ್ಣಯಕ್ಕೆ ಬಾಕ್ಸ್ ನೋಡಿ)

ಈ ನಿರ್ಣಯ ಏನು ತೋರಿಸುತ್ತದೆ? ಮೂರು ವರ್ಷಗಳ ಹಿಂದೆ ಪಾಟ್ನಾದಲ್ಲಿ ನಡೆದ 13ನೇ ಮಹಾಧಿವೇಶನ ಪಕ್ಷದ ಸರಿಯಾದ ರಾಜಕೀಯ ದಿಕ್ಕನ್ನು ನಿರ್ಧರಿಸುವುದು ಹೇಗೆ ಸಾಧ್ಯ?

ನಾಲ್ಕನೇ ಮಹಾಧಿವೇಶನದಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದಲ್ಲಿ ಇಂತಹುದೇ ಸನ್ನಿವೇಶ ಬಂದಿತ್ತು. ಆಗ ಕಾರ್ಯಕ್ರಮವನ್ನು ಅಮಾನತಿನಲ್ಲಿಡಲಾಗಿತ್ತು. ಕಾರ್ಯಕ್ರಮದ ಕೆಲವು ಅಂಶಗಳನ್ನು ರಾಜಕೀಯ ನಿರ್ಣಯದಲ್ಲಿ ಸೇರಿಸಲಾಗಿತ್ತು. ಇದೇ ಸಂಪ್ರದಾಯವನ್ನು ಮುಂದಿನ ಎರಡು ಮಹಾಧಿವೇಶನಗಳಲ್ಲಿ ಮುಂದುವರಿಸಲಾಯಿತು. ಕಾರ್ಯಕ್ರಮದಲ್ಲಿ ಅಗತ್ಯವೆಂದು ಕಂಡುಬಂದ ತಿದ್ದುಪಡಿಗಳನ್ನು ಯಾವರೀತಿ ಸಿ.ಪಿ.ಐ ತನ್ನ ಕೆಲಸದಲ್ಲಿ ಗಮನಕ್ಕೆ ತೆಗೆದುಕೊಳ್ಳುತ್ತದೆ ಎಂಬುದು ಅಸ್ಪಷ್ಟವಾಗಿದೆ.

ಅನುತ್ತೀರ್ಣವಾಗಿದ್ದರೆ, ಸಿ.ಪಿ.ಐ(ಎಂ) ನ ಕಾರ್ಯಕ್ರಮ ಸಹ ನ್ಯೂನತೆಗಳಿಂದ ಮುಕ್ತವಾಗಿಲ್ಲ ಎಂಬ ಅನ್ನಿಸಿಕೆಯನ್ನು ಪ್ರಚಾರ ಪಡಿಸುವುದು ಇದರ ಉದ್ದೇಶ. ಆದರೆ ಈ ರೀತಿ ಹೇಳುವಾಗ ಕಾರ್ಯಕ್ರಮ ಏನೆಂಬುದನ್ನು ಅರ್ಥಮಾಡಿಕೊಂಡಿಲ್ಲ ಎಂದು ತೋರಿಸಿಕೊಂಡಿದ್ದಾರೆ.

ಯಾವುದೇ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ ದೇಶದಲ್ಲಿ ಉತ್ಪಾದನಾ ಶಕ್ತಿಗಳು ಮತ್ತು ಉತ್ಪಾದನಾ ಸಂಬಂಧಗಳ ನಡುವಣ ವೈರುಧ್ಯವನ್ನು ದ್ವಂದ್ವಾತ್ಮಕ, ಚಾರಿತ್ರಿಕ ದೃಷ್ಟಿಯಿಂದ ವಿಶ್ಲೇಷಿಸಬೇಕು. ಇದರ ಆಧಾರದ ಮೇಲೆ ಪ್ರಭುತ್ವದ ವರ್ಗ ಸ್ವಭಾವ, ಕ್ರಾಂತಿಯ ಗುರಿಗಳು ಮತ್ತು ಇದನ್ನು ಸಾಧಿಸಲು ಬೇಕಾದ ವರ್ಗ ಮೈತ್ರಿ, ಅದರಲ್ಲಿ ವಿವಿಧ ವರ್ಗಗಳ ಪಾತ್ರವನ್ನು ನಿರ್ಧರಿಸುವುದು ಕಾರ್ಯಕ್ರಮದ ಮುಖ್ಯ ಅಂಗ.

ಭಾರತದ ಪ್ರಭುತ್ವ ಗುತ್ತೇದಾರಿಗಳ ನಾಯಕತ್ವದಲ್ಲಿರುವ ಬೂರ್ಜ್ವಾ ಭೂಮಾಲಕ ವರ್ಗಗಳದ್ದು. ಕೇಂದ್ರ ಸರ್ಕಾರದ ನಾಲ್ವತ್ತು ವರ್ಷಗಳ ಅನುಭವ ಈ ನಮ್ಮ ನಿರ್ವಚನೆ ಸರಿಯಾದದ್ದು ಎಂದು ತೋರಿಸಿಕೊಟ್ಟಿದೆ. ಸ್ವಾತಂತ್ರ್ಯದ ಮೊದಲೇ ಭಾರತದಲ್ಲಿ ಬಂಡವಾಳಶಾಹಿ ಬೆಳವಣಿಗೆ ಆಗಿತ್ತು ಮಾತ್ರವಲ್ಲ, ಗುತ್ತೇದಾರಿಗಳು ಅಸ್ತಿತ್ವದಲ್ಲಿದ್ದರು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಗುತ್ತೇದಾರಿ ಬಂಡವಾಳಶಾಹಿ ಹಲವುಪಟ್ಟು

ಪರಿಹರಿಸಲು ಈ ಮಹಾಧಿವೇಶನದಲ್ಲೂ ಅವರಿಗೆ ಸಾಧ್ಯವಾಗಿಲ್ಲ. ಹಳೆಯ ಕಾರ್ಯಕ್ರಮವನ್ನು ಪರಿಷ್ಕರಿಸಲು ಸಾಧ್ಯವಾಗದೆ ಅದನ್ನೇ ಹೊತ್ತುಕೊಂಡು ಮುಂದುವರಿಯುತ್ತಿದ್ದಾರೆ.

ಸಿ.ಪಿ.ಐ ಮಹಾಧಿವೇಶನ ಹೆಚ್ಚಿನ ಸಮಯವನ್ನು ರಾಜಕೀಯ ನಿರ್ಣಯ ಮತ್ತು ರಾಜಕೀಯ-ಸಂಘಟನಾ ವರದಿಯ ಚರ್ಚೆಗೆ ತೆಗೆದುಕೊಂಡಿತು. ಇಲ್ಲಿ ರಾಜಕೀಯ ನಿರ್ಣಯದ ಬಗ್ಗೆ ಮಾತ್ರ ಟಿಪ್ಪಣಿ ಮಾಡಲು ಸಾಧ್ಯ. ರಾಜಕೀಯ-ಸಂಘಟನಾ ವರದಿ ಇನ್ನೂ ನಮಗೆ ಸಿಕ್ಕಿಲ್ಲ. ರಾಜಕೀಯ ನಿರ್ಣಯ ಹೆಚ್ಚು ಕಡಿಮೆ ಸರಿಯಾದ ಹಾದಿಯಲ್ಲಿದೆ ಎಂದು ಹೇಳಬಹುದು.

ರಾಜಕೀಯ ನಿರ್ಣಯ ರಾಜೀವ ಗಾಂಧಿ ಸರ್ಕಾರವನ್ನು ಕಿತ್ತೊಗೆಯುವುದು, ಕೋಮುವಾದಿ ಛಿದ್ರಕಾರಿ ಶಕ್ತಿಗಳನ್ನು ಪ್ರತ್ಯೇಕಿಸುವುದು, ಎಡ ಐಕ್ಯತೆಯನ್ನು ಬಲಪಡಿಸುವುದು- ಪ್ರಮುಖ ಕರ್ತವ್ಯಗಳು ಎಂದು ಘೋಷಿಸಿದೆ. ಬರಲಿರುವ ಕಾಲ ಘಟ್ಟಕ್ಕೆ ಮಹಾಧಿವೇಶನ ಕೊಟ್ಟಿರುವ ಕಾರ್ಯತಂತ್ರ, ನಮ್ಮ ಪಕ್ಷದ

ಬದಲಿಯಲ್ಲ.

ಆದರೆ ಸಿ.ಪಿ.ಐ ನಿರ್ಣಯ "ಸ್ಪಷ್ಟ ಕಾರ್ಯಕ್ರಮವಿರುವ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಸರ್ಕಾರ" ರಾಜೀವ ಗಾಂಧಿ ಸರ್ಕಾರಕ್ಕೆ ಬದಲಿಯಾಗಿ ತರಬೇಕೆಂಬ ಘೋಷಣೆ ಕೊಟ್ಟಿದೆ. ಇಂದಿನ ಪರಿಸ್ಥಿತಿಯಲ್ಲಿ ಬರುವ ಚುನಾವಣೆಗಳಲ್ಲಿ ಇಂತಹ ಸ್ಪಷ್ಟ ಕಾರ್ಯಕ್ರಮವಿರುವ ಸರ್ಕಾರ ರಚಿಸಬಹುದು ಎಂಬ ಅಭಿಪ್ರಾಯವನ್ನು ನಮ್ಮ ಪಕ್ಷ ಒಪ್ಪುವುದಿಲ್ಲ. ನಾವು ಪ್ರಯತ್ನ ಮಾಡುತ್ತಿರುವುದು ಕೋಮುವಾದಿ ಶಕ್ತಿಗಳನ್ನು ಪ್ರತ್ಯೇಕಿಸಲು ಮತ್ತು ಜನರಿಗೆ ಸ್ವಲ್ಪ ಮಟ್ಟಿಗೆ ಪರಿಹಾರ ಒದಗಿಸಲು.

> ಈಗ ರಾಷ್ಟ್ರಮಟ್ಟದಲ್ಲಿ ರೂಪಿಸ ಬಯಸುವುದು ಚುನಾವಣಾ ಬದಲಿಯನ್ನು. ಇದು ನಿಜವಾದ ಪರ್ಯಾಯವಲ್ಲ ಈ ಬಗ್ಗೆ ಕಮ್ಯುನಿಸ್ಟರಲ್ಲಿ ಸ್ಪಷ್ಟತೆಯಿರಬೇಕು ಇಲ್ಲವಾದರೆ ಕಾಂಗ್ರೆಸ್ (ಐ) ಪ್ರತಿನಿಧಿಸುವ ಆಳುವ ವರ್ಗದ ಹಿತಾಸಕ್ತಿಗಳನ್ನೇ ಪ್ರತಿನಿಧಿಸುವ ವಿರೋಧ ಪಕ್ಷಗಳು ನೀಡುವ ಪರ್ಯಾಯ ಜನರ ಸಮಸ್ಯೆಗಳನ್ನೆಲ್ಲಾ ಪರಿಹರಿಸುವುದು ಎಂಬ ಭ್ರಮೆಗೆ ಅವಕಾಶವಾಗುತ್ತದೆ.

ಚುನಾವಣೆಯಲ್ಲಿ ಎಡ ಶಕ್ತಿಗಳ ಪ್ರಭಾವದ ಮೇಲೆ ಹೆಚ್ಚಿನವು ಅವಲಂಬಿಸಿರುತ್ತದೆ. ಇದು ಮುಂದಿನ ಬೆಳವಣಿಗೆಗಳ ಮೇಲೂ ಪರಿಣಾಮ ಬೀರಬಲ್ಲುದು.

ಈ ಬಗ್ಗೆ ಕಮ್ಯುನಿಸ್ಟರಲ್ಲಿ ಸ್ಪಷ್ಟತೆ ಇರಬೇಕು. ಇಲ್ಲದಿದ್ದರೆ ಕಾಂಗ್ರೆಸ್ (ಐ) ಪ್ರತಿನಿಧಿಸುವ ಆಳುವ ವರ್ಗದ ಹಿತಾಸಕ್ತಿಗಳನ್ನೇ ಪ್ರತಿನಿಧಿಸುವ ವಿರೋಧ ಪಕ್ಷಗಳು ನಿಜವಾದ ಬದಲಿ ಕೊಡುವ,

---

ಸಿ.ಪಿ.ಐ. ಕಾರ್ಯಕ್ರಮ ತಿದ್ದು ಪಡೆಯ ಬಗ್ಗೆ
14ನೇ ಮಹಾದಿವೇಶನ ನಿರ್ಣಯ

"ಪಕ್ಷದ ಮೂಲಭೂತ ದಸ್ತಾವೇಜಾದ - ಕಾರ್ಯಕ್ರಮದ ಬಗ್ಗೆ ಪಕ್ಷದ ಘಟಕಗಳಲ್ಲಿ, ಕಾರ್ಯಕರ್ತರು, ಸಮರ್ಥಕರು ಮತ್ತು ಸಹಾನುಭೂತಿಯುಳ್ಳವರು ವ್ಯಾಪಕ ಚರ್ಚೆಯಲ್ಲಿ ಪಾಲುಗೊಳ್ಳಲು ಅನುವಾಗುವಂತೆ ಇನ್ನು ಮುಂದೆಯೂ ಪಕ್ಷದ ಪತ್ರಿಕೆಗಳಲ್ಲಿ ಚರ್ಚೆ ಮುಂದುವರಿಯಬೇಕೆಂದು ನಿರ್ಣಯಿಸುತ್ತದೆ..

ಈ ಮಹಾಧಿವೇಶನ ಪಕ್ಷದ ಹೊಸ ಕಾರ್ಯಕ್ರಮವನ್ನು ಅಂಗೀಕರಿಸಲು ವಿಶೇಷ ಮಹಾಧಿವೇಶನ ಕರೆಯಲು ಸಿದ್ಧತೆ ನಡೆಸಬೇಕೆಂದು ರಾಷ್ಟ್ರೀಯ ಸಮಿತಿಗೆ ನಿರ್ದೇಶನ ಕೊಡುತ್ತದೆ. ಕಾರ್ಯಕ್ರಮದ ತಿದ್ದುಪಡಿ ಅಖೈರಾಗಿ ತೀರ್ಮಾನವಾಗುವವರೆಗೆ ಪಕ್ಷದ 7ನೇ ಮಹಾಧಿವೇಶನದಲ್ಲಿ (ಮುಂಬಯಿ, 1964) ಅಂಗೀಕರಿಸಿದ ಮತ್ತು 8ನೇ ಮಹಾಧಿವೇಶನದಲ್ಲಿ (ಪಾಟ್ನಾ 1968) ತಿದ್ದುಪಡಿ ಮಾಡಿದ ಕಾರ್ಯಕ್ರಮ ಜಾರಿಯಲ್ಲಿರುತ್ತದೆ..."



ಹರ್ಕಿಶನ್‌ಸಿಂಗ್ ಸುರ್ಜಿತ್

ಸಿ.ಪಿ.ಐ.ನಲ್ಲಿ ಕಾರ್ಯಕ್ರಮ ಕುರಿತಾದ ಚರ್ಚೆಯಲ್ಲಿ ಹಲವು ಸಂಗಾತಿಗಳು ಪ್ರಭುತ್ವದ ವರ್ಗ ಸ್ವಭಾವದ ಬಗ್ಗೆ ವರ್ಗ ಮೈತ್ರಿಯಲ್ಲಿ ವಿವಿಧ ವರ್ಗಗಳ ಪಾತ್ರದ ಬಗ್ಗೆ ತಿಳುವಳಿಕೆ ತಪ್ಪೆಂದು ಒಪ್ಪಿಕೊಂಡಿದ್ದಾರೆ. ಆದರೆ ಸಿ.ಪಿ.ಐ. (ಎಂ) ಕಾರ್ಯಕ್ರಮದಲ್ಲಿಯೂ ತಪ್ಪುಗಳಿವೆಯೆಂದು ತೋರಿಸಲು ಪ್ರಯತ್ನಿಸಿದ್ದಾರೆ. ಈ ರೀತಿ ಹೇಳುವಾಗ 'ಕಾರ್ಯಕ್ರಮ' ಎಂದರೇನು ಎಂಬುದನ್ನೇ ಅವರು ಅರ್ಥ ಮಾಡಿಕೊಂಡಿಲ್ಲ ಎಂದೂ ತೋರಿಸಿಕೊಂಡಿದ್ದಾರೆ.

ಈಗ ರಾಷ್ಟ್ರಮಟ್ಟದಲ್ಲಿ ರೂಪಿಸ ಬಯಸುವುದು ಚುನಾವಣಾ ಬದಲಿಯನ್ನು. ಇದು ನಿಜವಾದ ಪರ್ಯಾಯವಲ್ಲ ಈ ಬಗ್ಗೆ ಕಮ್ಯುನಿಸ್ಟರಲ್ಲಿ ಸ್ಪಷ್ಟತೆಯಿರಬೇಕು ಇಲ್ಲವಾದರೆ ಕಾಂಗ್ರೆಸ್ (ಐ) ಪ್ರತಿನಿಧಿಸುವ ಆಳುವ ವರ್ಗದ ಹಿತಾಸಕ್ತಿಗಳನ್ನೇ ಪ್ರತಿನಿಧಿಸುವ ವಿರೋಧ ಪಕ್ಷಗಳು ನೀಡುವ ಪರ್ಯಾಯ ಜನರ ಸಮಸ್ಯೆಗಳನ್ನೆಲ್ಲಾ ಪರಿಹರಿಸುವುದು ಎಂಬ ಭ್ರಮೆಗೆ ಅವಕಾಶವಾಗುತ್ತದೆ.

ಜನರ ಸಮಸ್ಯೆಗಳನ್ನು ಪರಿಹರಿಸುವ ಸಾಧ್ಯತೆ ಇದೆ ಎನ್ನುವ ಭ್ರಮೆಗೆ ಅವಕಾಶವಿದೆ. ನಾವು ಹೇಳುವ ಎಡ ಮತ್ತು ಪ್ರಜಾಸತ್ತಾತ್ಮಕ ಬದಲಿ ಈ ಆಳುವ ವರ್ಗಗಳ ಪ್ರಭಾವದಿಂದ ಹೊರತಾಗಿರು ವಂತಹದ್ದು. ಈ ಬದಲಿಯನ್ನು ಮುಂದಿಡುವ ಪಕ್ಷಗಳು ಶಕ್ತಿಗಳು ಪಾಳೆಯಗಾರಿ-ವಿರೋಧಿ, ಸಾಮ್ರಾಜ್ಯಶಾಹಿ-ವಿರೋಧಿ, ಗುತ್ತೇದಾರಿ ವಿರೋಧಿ ಪ್ರಜಾಸತ್ತಾತ್ಮಕ ಕೆಲಸಗಳನ್ನು ಮಾಡಲು ತಯಾರಿರಬೇಕು. ಇಂತಹ ಸ್ಪಷ್ಟನೆ ಅಗತ್ಯ ವಾಗಿದೆ. ಏಕೆಂದರೆ ಸಿ.ಪಿ.ಐ ನಾಯಕರು

ಮುಖ್ಯ ಶಕ್ತಿ ಡಿ.ಎಂ.ಕೆ. ಅದರ ಜತೆ ಸಿ.ಪಿ.ಐ., ಸಿ.ಪಿ.ಐ. ಸಿ.ಪಿ.ಐ.(ಎಂ) ಎರಡೂ ಸಹಕರಿಸಿತ್ತು. ಆದರೆ ಸಿ.ಪಿ.ಐ. ತಮಿಳು ನಾಡು ಘಟಕ ಆ ಮೇಲೆ ಜಯಲಲಿತಾ ಬಣದ ಜತೆ ಮೈತ್ರಿ ಸಾಧಿಸಿ 'ಮೂರನೆಯ ರಂಗ' ರಚಿಸಲು ನಿರ್ಧರಿಸಿತು. ಆದರೆ ಈಗ ಜಯಲಲಿತಾ ಕಾಂಗ್ರೆ ಜತೆ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ. ಇಂತಹ ಪ್ರಕ್ರಿಯೆ ಮತ್ತು ಸಿ.ಪಿ.ಐ. ತನ್ನ ನೀತಿಯನ್ನು ಪಾತ್ರವನ್ನು ಈಗ ಹೇಗೆ ಸಮರ್ಥಿಸಿಕೊಳ್ಳುತ್ತದೆ?

ಪಕ್ಷಗಳ ಐಕ್ಯತೆ ಬಗ್ಗೆ ನಾವು ಯಾವ ರೀತಿ ಧೋರಣೆ ಅನುಸರಿಸಬೇಕು? ಇಂತಹ ಐಕ್ಯತೆಗೆ ಪೂರಕವಾದ ಪಾತ್ರ ವಹಿಸಬೇಕು. ಎಡ ಮತ್ತು ರಾಷ್ಟ್ರೀಯ ರಂಗದ ಪಕ್ಷಗಳು ಜಂಟಿಯಾಗಿ ಮಾತ್ರ ರಾಜೀವ ಸರಕಾರವನ್ನು ಅಧಿಕಾರದಿಂದ ಇಳಿಸಲು ಸಾಧ್ಯ. ಈ ಮೈತ್ರಿಯನ್ನು ಕೆಡಿಸುವುದು ಕಾಂಗ್ರೆಗೆ ಸಹಾಯ ಮಾಡಿದಂತೆ. ಈ ವಿರೋಧಾಭಾಸವನ್ನು ಸಿ.ಪಿ.ಐ. ಸರಿಪಡಿಸಿಕೊಳ್ಳಬೇಕು.

ತಪ್ಪು ಆಪಾದನೆ

ಎಡ ಮತ್ತು ಕಾಂಗ್ರೆ ಸರಕಾರವಿಲ್ಲದ ರಾಜ್ಯಗಳಲ್ಲಿ (ಕರ್ನಾಟಕ, ತಮಿಳುನಾಡು, ಆಂಧ್ರ) ಸಾಮೂಹಿಕ ಸಂಘಟನೆ, ಚಳುವಳಿಗಳನ್ನು ಬೆಳೆಸು ವುದರಲ್ಲಿ ಸಿ.ಪಿ.ಐ. (ಎಂ) ಹಿಂದೆ ಬಿದ್ದಿದೆ ಎಂದು ನ್ಯೂ ಏಜ್" ಲೇಖನಗಳಲ್ಲಿ ಸಿ.ಪಿ.ಐ. ನಾಯಕರು ಆಪಾದಿಸಿದ್ದಾರೆ. ಇದು ನಿಜವಲ್ಲ. ಕಳೆದ ಮೂರು ವರ್ಷಗಳಲ್ಲಿ ಈ ರಾಜ್ಯಗಳಲ್ಲಿ ಸಿ.ಪಿ.ಐ(ಎಂ) ನೇತೃತ್ವದಲ್ಲಿ ನಡೆದ ಸಾಮೂಹಿಕ ಹೋರಾಟಗಳನ್ನು ಕಾರ್ಮಿಕ ವರ್ಗ ರೈತರ, ಕೃಷಿಕೂಲಿಗಾರರ ಹೋರಾಟಗಳನ್ನು ಯುವಜನ, ವಿದ್ಯಾರ್ಥಿ, ಮಹಿಳೆಯರ ಹೋರಾಟಗಳನ್ನು ಗಮನಿಸಿದಾಗ ಎಡ ಶಕ್ತಿಗಳು ಸಾಧಿಸಿದ ಯಶಸ್ಸಿನಲ್ಲಿ ಸಿ.ಪಿ.ಐ. (ಎಂ)' ಮುಂಚೂಣಿಯಲ್ಲಿ, ಸಿ.ಪಿ.ಐ.(ಎಂ) ಇತರ ಎಡ ಪಕ್ಷಗಳೊಂದಿಗೆ ತನ್ನ

ಸಿ.ಪಿ.ಐ.ನಲ್ಲಿ ಕಾರ್ಯಕ್ರಮ ಕುರಿತಾದ ಚರ್ಚೆಯಲ್ಲಿ ಹಲವು ಸಂಗಾತಿಗಳು ಪ್ರಭುತ್ವದ ವರ್ಗ ಸ್ವಭಾವದ ಬಗ್ಗೆ ವರ್ಗ ಮೈತ್ರಿಯಲ್ಲಿ ವಿವಿಧ ವರ್ಗಗಳ ಪಾತ್ರದ ಬಗ್ಗೆ ತಿಳುವಳಿಕೆ ತಪ್ಪೆಂದು ಒಪ್ಪಿಕೊಂಡಿದ್ದಾರೆ. ಆದರೆ ಸಿ.ಪಿ.ಐ. (ಎಂ) ಕಾರ್ಯಕ್ರಮದಲ್ಲಿಯೂ ತಪ್ಪುಗಳಿವೆಯೆಂದು ತೋರಿಸಲು ಪ್ರಯತ್ನಿಸಿದ್ದಾರೆ. ಈ ರೀತಿ ಹೇಳುವಾಗ 'ಕಾರ್ಯಕ್ರಮ' ಎಂದರೇನು ಎಂಬುದನ್ನೇ ಅವರು ಅರ್ಥ ಮಾಡಿಕೊಂಡಿಲ್ಲ ಎಂದೂ ತೋರಿಸಿಕೊಂಡಿದ್ದಾರೆ.

ವನ್ನು ಇಂದು ರೂಪಿಸಲು ಪ್ರಯತ್ನಿಸುತ್ತಿ ರುವ ಬದಲಿ, ನಿಜವಾದ ಬದಲಿಯೆಂಬ ಅನಿಸಿಕೆಯನ್ನು ಹುಟ್ಟಿಸುತ್ತಿದ್ದಾರೆ.

ಇದೇ ರೀತಿ ತೆಲುಗು ದೇಶಂ ಪಕ್ಷದ ಬಗ್ಗೆ ಸಿ.ಪಿ.ಐ. ನೀತಿ ವಿರೋಧಾ ಭಾಸದಿಂದ ಕೂಡಿದೆ. ರಾಷ್ಟ್ರೀಯ ರಂಗದ

...ೆ ಇನ್ನೂ ಅಸ್ಪಷ್ಟತೆ

ವಿರೋಧಾಭಾಸ

ಜಾತ್ಯತೀತ, ಪ್ರಜಾಪ್ರಭುತ್ವ ...ರೋಧ ಪಕ್ಷಗಳ ಬಗ್ಗೆ ಅದರಲ್ಲೂ ಜನತಾದಳ ಮತ್ತು ರಾಷ್ಟ್ರೀಯ ರಂಗಗಳ ಬಗ್ಗೆ ಸಿ.ಪಿ.ಐ ಸರಿಯಾದ ನೀತಿಯನ್ನು ...ದು ಕೊಂಡಿದೆ (ಬಾಕ್ಸ್ ನೋಡಿ) ...ತಹ ನೀತಿಯನ್ನು ಅಂಗೀಕರಿಸಿದ ...ಭೀರವಾದ ಪಕ್ಷವೊಂದು ಇಂತಹ ...ವನೆಗೆ ಸರಿಯಾದ ದಿಕ್ಕಿನಲ್ಲಿ ಹೋಗು ...ತೆ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ...ದು ನಿರೀಕ್ಷಿಸುವುದು ತಪ್ಪೇನಲ್ಲ.

ಆದರೆ ತಮಿಳುನಾಡು ಮತ್ತು ...ಧ್ರ ಪ್ರದೇಶಗಳಲ್ಲಿ ಸಿ.ಪಿ.ಐ.ನ ...ಮಗಳು ಮತ್ತು ಮೇಲಿನ ನೀತಿಗೆ ...ರೋಧಾಭಾಸವಿದೆ.

ಉದಾಹರಣೆಗೆ ...ಮಿಳುನಾಡಿನಲ್ಲಿ, ಎ.ಐ.ಎ.ಡಿ.ಎಂ.ಕೆ. (ಜಯಲಲಿತಾ ಬಣ) ಕಾಂಗ್ರೆ ಜತೆ ಮೈತ್ರಿ ...ಂದಿದ್ದು, ಕಾಂಗ್ರೆ ಅದರ ಶರತ್ತುಗಳಿಗೆ ...ದ್ದರಿಂದ ಪ್ರತ್ಯೇಕವಾಗಿ ಚುನಾವಣೆ ...ಗಿತು ಎಂದು ಎಲ್ಲರಿಗೂ ...ತಿಳಿದಿರುವಂಥದ್ದು. ಆದರೂ ಸಿ.ಪಿ.ಐ. ...ಯಲಲಿತಾ ಬಣ ಜತೆ ಚುನಾವಣಾ ...ತ್ರಿ ಮಾಡಿಕೊಂಡಿತು. ಸಿ.ಪಿ.ಐ. ಕೇಂದ್ರ ...[illegible] ಕಾಂಗ್ರೆ ಪರಾಭವವನ್ನು ...[illegible]. ಆದರೆ ಇದರ ಪರಿಣಾಮ ...ಮತ್ತು ಕಾರ್ಯತಂತ್ರದಲ್ಲಿ, ಅಗತ್ಯ ...ದ ಬದಲಾವಣೆಯನ್ನು ಗಮನಿಸಲಿಲ್ಲ.

ಕಾಂಗ್ರೆಯನ್ನು ಪರಾಭವಗೊಳಿಸದ

ಪಾತ್ರವನ್ನು ಪೂರ್ಣವಾಗಿ ಸಮರ್ಥಿಸಿ 'ತೆಲುಗುದೇಶಂ' ನ್ನು ಪೂರ್ಣವಾಗಿ ವಿರೋಧಿಸುವುದು ವಿರೋಧಾಭಾಸವಲ್ಲದೆ ಮತ್ತೇನು? ರಾಷ್ಟ್ರೀಯ ರಂಗ ಮತ್ತು ತೆಲುಗು ದೇಶಂ ಅಧ್ಯಕ್ಷರು ಒಬ್ಬರೇ 'ತೆಲುಗುದೇಶಂ' 'ರಾಷ್ಟ್ರೀಯ ರಂಗ'ದ ಪ್ರಮುಖ ಅಂಗ. ಇದರರ್ಥ ಎಡ ಪಕ್ಷಗಳು 'ತೆಲುಗುದೇಶಂ'ನ ತಪ್ಪು ಗಳನ್ನು ನೋಡಿ ಕಣ್ಣುಮುಚ್ಚಿ ಕುಳಿತು ಕೊಳ್ಳಬೇಕೆಂದಲ್ಲ, ಅಥವಾ ದುಡಿಯುವ ಜನರ ಹಿತಾಶಕ್ತಿಗಳನ್ನು ಅಲಕ್ಷಿಸಬೇಕೆಂದಲ್ಲ. ಆದರೆ ಕಾಂಗ್ರೆಯನ್ನು ಪರಾಭವಗೊಳಿಸುವ ವಿಶಾಲ ರಂಗದಲ್ಲಿ ತೆಲುಗುದೇಶಂ'ಗೆ ಮುಖ್ಯ ಪಾತ್ರವಿದೆ.

ರಾಜೀವ ಗಾಂಧಿಯನ್ನು ಅಧಿಕಾರದಿಂದಿಳಿಸುವುದು ನಮ್ಮ ತಕ್ಷಣದ ಕರ್ತವ್ಯ ಎಂದಾದ ಮೇಲೆ, ಜಾತ್ಯತೀತ

ಪಾತ್ರವಹಿಸದೆ ಇದು ಸಾಧ್ಯವಾಗುತ್ತಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ನಿಸ್ಸಂಶಯವಾಗಿಯೂ ಸಧ್ಯದ ರಾಜಕೀಯ ಸನ್ನಿವೇಶದಲ್ಲಿ ಎಡ ಐಕ್ಯತೆ ಮಹತ್ವಪೂರ್ಣವಾದದ್ದು. ಮುಂಬರುವ ಕಾಲಘಟ್ಟದಲ್ಲಿ ಭೂಮಿಯ ಪ್ರಶ್ನೆ ಮತ್ತು ದುಡಿಯುವ ಜನಗಳನ್ನು ತಟ್ಟುವ ಹಲವಾರು ಪ್ರಶ್ನೆಗಳ ಮೇಲೆ, ಅಸಂಸ್ಕೃತಿಯನ್ನು ಛಿದ್ರಕಾರೀ ಮಾರ್ಗದತ್ತ ದಿಕ್ಕುಗೆಡಿಸುವ ಕೋಮು ಶಕ್ತಿಗಳ ವಿರುದ್ಧ ಸಾಮೂಹಿಕ ಹೋರಾಟಗಳಿಗೆ ನೇತೃತ್ವ ನೀಡುತ್ತಾ ಎಡ ಐಕ್ಯತೆಯನ್ನು ಬಲಗೊಳಿಸುವುದು ಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳನ್ನು ಒಟ್ಟುಗೂಡಿಸಿ ರಾಜೀವ ಗಾಂಧಿ ಸರ್ಕಾರಕ್ಕೆ ದೊಡ್ಡ ಸೋಲುಂಟುಮಾಡಲು ಸಾಧ್ಯ ಎಂಬ ಭರವಸೆ ನಮಗಿದೆ.

ಪ್ರಜಾಸತ್ತಾತ್ಮಕ ಪಕ್ಷಗಳ ಬಗ್ಗೆ ಸಿ.ಪಿ.ಐ. ಮಹಾಧಿವೇಶನ ನಿರ್ಣಯ

"ಕಾಂಗ್ರೆನಲ್ಲಿ ಬಿರುಕು ಮತ್ತು ಅದರ ಜನ ಬೆಂಬಲದಲ್ಲಿ ಕುಸಿತ, ಜನತಾದಳದ ಉದಯಕ್ಕೆ ಎಡೆ ಮಾಡಿಕೊಟ್ಟಿರುವುದು ಒಂದು ಪ್ರಮುಖ ರಾಜಕೀಯ ಬೆಳವಣಿಗೆ. ನ್ಯೂನ್ಯತೆಗಳು, ಬಲಹೀನತೆಗಳು, ಅಂತರಿಕ ಕಚ್ಚಾಟಗಳು, ಅಲ್ಲದೆ ಕೆಲವು ಪಕ್ಷಗಳಲ್ಲಿ ಕೆಲವು- ಬಲಪಂಥೀಯ ಸಾಮ್ರಾಜ್ಯಶಾಹಿ - ಪರ ಕೋಮುವಾದಿ ಒಲವುಳ್ಳ ವ್ಯಕ್ತಿಗಳು ಇದ್ದಾಗ್ಯೂ, ಜನತಾದಳ ಮತ್ತು ರಾಷ್ಟ್ರೀಯ ರಂಗದ ಬಗ್ಗೆ ನಕಾರಾತ್ಮಕ ದೃಷ್ಟಿ ತಳೆಯುವುದು ತಪ್ಪಾಗುತ್ತದೆ. ಹೆಚ್ಚಿನ ಪಕ್ಷಗಳು ಹೆಚ್ಚು ಕಡಿಮೆ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಪಕ್ಷಗಳು. ನಾವು ಈ ಪಕ್ಷಗಳ ಬಗ್ಗೆ ಸಕಾರಾತ್ಮಕ ಧೋರಣೆ ತಳೆದು ಅವುಗಳನ್ನು ಪುರೋಗಾಮಿ ಮತ್ತು ಪ್ರಗತಿಗಾಮಿ ಕಾರ್ಯಕ್ರಮಗಳ ಪರವಾಗಿ ನಿಲ್ಲುವಂತೆ ಸಕ್ರಿಯವಾಗಿ ಮಧ್ಯಪ್ರವೇಶಿಸಬೇಕು..."

ಪಂಚಾಯತೀ ರಾಜ್ಯ ಕರಡು

ಪ್ರಧಾನಮಂತ್ರಿಗಳಿಗೊಂದು ನೇರ ಸರಳ ಪ್ರಶ್ನೆ

ಇ.ಎಂ.ಎಸ್.ನಂಬೂದಿರಿಪ್ಪಾಡ್

ಪಂಚಾಯತೀ ರಾಜ್ಯ ಕುರಿತು ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಕೇಂದ್ರ ಸರ್ಕಾರದ ಮುಖಂಡರು ಅಶೋಕ ಮೆಹ್ತಾ ಸಮಿತಿಯ ವರದಿಯನ್ನು ಉದ್ಧರಿಸಿರುವ ಬಗ್ಗೆ ಕೇಳಿ ನನಗೆ ಆಶ್ಚರ್ಯವಾಯಿತು. ನಾನೂ ಆ ಸಮಿತಿಯ ಒಬ್ಬ ಸದಸ್ಯನಾಗಿದ್ದೆ. ಆ ಸಮಿತಿ ಸಂವಿಧಾನದ ತಿದ್ದುಪಡಿಗೆ ಶಿಫಾರಸುಮಾಡಿತು ಎಂದು ಹೇಳುವುದು ಸೈತಾನ ಧರ್ಮಗ್ರಂಥವನ್ನು ಉದ್ಧರಿಸಿದಂತೆಯೇ ಸರಿ.

ಪಂಚಾಯತೀ ರಾಜ್ಯವೆಂಬುದು ಏಕಾಂಗಿಯಾಗಿ,ಪ್ರತ್ಯೇಕವಾಗಿ ನಿಲ್ಲುವುದಿಲ್ಲ; ಅದು ಅಖಿಲ ಭಾರತ ಕೇಂದ್ರದಿಂದ ಹಳ್ಳಿಯವರೆಗಿನ ಸರ್ವವ್ಯಾಪಿ ವಿಕೇಂದ್ರೀಕರಣದ ಭಾಗ ಎಂಬ ಬಗ್ಗೆ, ಅಶೋಕ ಮೆಹ್ತಾ ಸಮಿತಿ ಸ್ಪಷ್ಟವಾಗಿತ್ತು. ಆದ್ದರಿಂದ ಅದು ಕೇಂದ್ರರಾಜ್ಯ ಸಂಬಂಧಗಳ ಮೇಲೆ ಒಂದು ಪ್ರತ್ಯೇಕ ವಿವರವಾದ ಪರಿಶಿಲನೆ ನಡೆಯಬೇಕೆಂದು ಸೂಚಿಸಿತು. ಆ ಪರಿಶೀಲನೆ ಈಗ ಮುಗಿದಿದೆ. ನಾನಿಲ್ಲಿ ಸರ್ಕಾರಿಯ ಆಯೋಗದ ವರದಿಯ ಬಗ್ಗೆ ಪ್ರಸ್ತಾಪಿಸುತ್ತಿದ್ದೇನೆ. ಸರಕಾರದ ಕೈಗೆ ಆ ವರದಿ ಬಂದು ಎರಡು ವರ್ಷಗಳಾಗುತ್ತಾ ಬಂತು. 'ಜನತೆಗೆ ಪ್ರಜಾಪ್ರಭುತ್ವ' ಎಂದು ಹೇಳುತ್ತಾ ತಿರುಗುವ ರಾಜೀವಗಾಂಧಿ ಸರ್ಕಾರ ಸರ್ಕಾರಿಯ ಆಯೋಗದ ಅತ್ಯಂತ ಮಂದ ಶಿಫಾರಸುಗಳನ್ನು ಕೂಡಾ ಅನುಷ್ಠಾನಕ್ಕೆ ತರಲು ನಿರಾಕರಿಸುತ್ತಿದೆ. ರಾಜ್ಯಪಾಲರ ನೇಮಕ ರಾಜ್ಯಗಳಲ್ಲಿ ಚುನಾಯಿತ ಸರಕಾರದ ವಜಾ ಮುಂತಾದವುಗಳ ಬಗ್ಗೆ ಪ್ರಮುಖ ಶಿಫಾರಸುಗಳನ್ನು ಎಗ್ಗಿಲ್ಲದೆ ಉಲ್ಲಂಘಿಸಲಾಗುತ್ತಿದೆ. ಕರ್ನಾಟಕದ ಬೊಮ್ಮಾಯಿ ಸರಕಾರದ ವಜಾ ಇದಕ್ಕೆ ಇತ್ತೀಚಿನ ಉದಾಹರಣೆ. ಅಶೋಕಮೆಹ್ತಾ ವರದಿಯನ್ನು ಜಾರಿಗೆ ತರಲು ರಾಜೀವಗಾಂಧಿ ಸರ್ಕಾರ ಕಾತುರವಾಗಿದ್ದರೆ, ಅದರ ಜತೆಗೇ ಸರ್ಕಾರಿಯಾ ಆಯೋಗದ ಶಿಫಾರಸುಗಳನ್ನು ಅದು ಜಾರಿಗೆ ತರಲೇಬೇಕಾಗುತ್ತದೆ.

ಪಂಚಾಯತೀ ರಾಜ್ಯ ಸಂಸ್ಥೆಗಳಿಗೆ ನಿಯಮಿತವಾಗಿ ಚುನಾವಣೆಗಳನ್ನು ನಡೆಸುವಂತೆ ಅವಕ್ಕೆ ಸಾಕಷ್ಟು ಅಧಿಕಾರ ನೀಡುವಂತೆ ಸಂವಿಧಾನ ವಿಧಿಸಬೇಕೆಂದು ಇತರ ಹತ್ತಾರು ಗೆಳೆಯರೊಂದಿಗೆ ನನಗು ಅನ್ನಿಸಿತು ಎಂಬುದು ನಿಜ. ಆದ್ದರಿಂದಲೇ ನಾವು ಸಂವಿಧಾನಕ್ಕೆ ಆ ತಿದ್ದುಪಡಿ ಮಸೂದೆಯನ್ನು ಸೂಚಿಸಿದೆವು. ಅದಕ್ಕೆ ಕಾರಣವಿಷ್ಟೆ. ಆಗ ಹೆಚ್ಚಿನ ರಾಜ್ಯ ಸರಕಾರಗಳು (ಹೆಚ್ಚಿನವನ್ನು ಕಾಂಗ್ರೆಸ್ ಪಕ್ಷವೇ ನಡೆಸುತ್ತಿತ್ತು) ಪಂಚಾಯತುಗಳಿಗೆ ಅಧಿಕಾರಗಳನ್ನು ವರ್ಗಾಯಿಸಲಿಲ್ಲ, ಚುನಾವಣೆ ನಡೆಸುತ್ತಿರಲಿಲ್ಲ.

ಪ್ರಧಾನಮಂತ್ರಿಮತ್ತು ಅವರುಸಹಯೋಗಿಗಳಿಗೊಂದು ನೇರ ಸರಳ ಪ್ರಶ್ನೆ ಅವರು ತಮ್ಮ ಪಂಚಾಯತೀರಾಜ್ಯಮಸೂದೆಯನ್ನು ವಾಪಾಸು ಪಡೆದು 1978ರಲ್ಲಿ ಅಶೋಕಮೆಹ್ತಾ ಸಮಿತಿ ಸೂಚಿಸಿದ ಕರಡನ್ನು ಅಂಗೀಕರಿಸುವರೇ ?

ಆದರೆ ಪರಿಸ್ಥಿತಿನಂತರ ಸಂಪೂರ್ಣ ಬದಲಾಗಿದೆ. ಕರ್ನಾಟಕ, ಆಂಧ್ರಪ್ರದೇಶ, ಕೇರಳ ಮತ್ತು ಪಶ್ಚಿಮ ಬಂಗಾಳ ಸರಕಾರಗಳು ಸೇರಿದಂತೆ ವಿರೋಧ ಪಕ್ಷಗಳ ಆಳ್ವಿಕೆಯ ರಾಜ್ಯಗಳಲ್ಲಿ ಸಮಯಕ್ಕೆ ಸರಿಯಾಗಿ ಪಂಚಾಯತೀ ಚುನಾವಣೆಗಳು ನಡೆಯುತ್ತಿವೆ. ಕಾಂಗ್ರೆಸ್ಸೇತರ ರಾಜ್ಯ ಸರ್ಕಾರಗಳು ಪಂಚಾಯತೀ ರಾಜ್ಯದ ಸಂಘಟನೆ ಮತ್ತು ಕಾರ್ಯನಿರ್ವಹಣೆಯಲ್ಲಿ ಉತ್ತಮ ಕೆಲಸ ಮಾಡಿವೆ ಎಂದು ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಸ್ವತಃ ರಾಜೀವಗಾಂಧಿಯವರೇ ಇದನ್ನು ಒಪ್ಪಿಕೊಳ್ಳಬೇಕಾಗಿ ಬಂತು. ಆದ್ದರಿಂದ ಇದರಲ್ಲಿ ಅಡ್ಡಿಯಾಗಿದ್ದದ್ದು ಕಾಂಗ್ರೆಸ್ ಪಕ್ಷದ ರಾಜಕೀಯ ಇಚ್ಛಾಶಕ್ತಿಯ ಅಭಾವ ಎಂಬುದು ಸ್ಪಷ್ಟವಾಗುತ್ತದೆ.

ಈ ಕಾಂಗ್ರೆಸ್ಸೇತರ ರಾಜ್ಯಗಳಲ್ಲಿನ ಪಂಚಾಯತೀ ರಾಜ್ಯ ಸಂಸ್ಥೆಗಳು ಒಂದೇ ಮಾದರಿಯಲ್ಲಿಲ್ಲ. ತಂತಮ್ಮ ಸನ್ನಿವೇಶಕ್ಕೆ ಅನುಗುಣವಾಗಿ ತಮ್ಮದೇ ವಿಧಾನ ಅವು ರೂಪಿಸಿವೆ. ರಾಜೀವಗಾಂಧಿ ಮಸೂದೆ ಈ ವಿವಿಧತೆಯನ್ನು ಇಲ್ಲವಾಗಿಸಿ ಪಂಚಾಯತೀ ರಾಜ್ಯಕ್ಕೊಂದು ಏಕರೂಪ ನೀಡಲು ಬಯಸುತ್ತಿದೆ. ಇದು ವಿಕೇಂದ್ರೀಕರಣದ ಪರಿಕಲ್ಪನೆಗೇ ವಿರುದ್ಧವಾದದ್ದು.

ಈಗ ನಾನು ಸಹಕಾರಿದ ಕರಡು ಮಸೂದೆ ಮತ್ತು ರಾಜೀವ ಗಾಂಧಿ ಸರ್ಕಾರದ ಕರಡಿನ ನಡುವಿನ ಪ್ರಮುಖ ವ್ಯತ್ಯಾಸಗಳನ್ನು ಪರಿಶೀಲಿಸೋಣ.

ಮೊದಲನೆಯದಾಗಿ, ನಮ್ಮ ಕರಡಿನ ಪ್ರಕಾರ ಪಂಚಾಯತೀ ರಾಜ್ಯ ಸಂಸ್ಥೆಗಳಿಗೆ ರಾಜ್ಯ ಸರ್ಕಾರಗಳು ಚುನಾವಣೆ ನಡೆಸಬೇಕು. ಆದರೆ ರಾಜೀವ ಸರ್ಕಾರದ ಕರಡು ಅದನ್ನು ಚುನಾವಣಾ ಆಯೋಗಕ್ಕೆ ಒಪ್ಪಿಸಬೇಕೆನ್ನುತ್ತದೆ.

ಎರಡನೆಯದಾಗಿ, ನಮ್ಮ ಕರಡು ಮಸೂದೆ ಪಂಚಾಯತ್ ನಿಧಿಗಳ ನಿರ್ವಹಣೆ ಆ ನಿಧಿಗಳಿಗೆ ಪಾವತಿಯ ವಿಧಾನಗಳು ಇತ್ಯಾದಿಗಳ ಬಗ್ಗೆ ನಿಯಮಗಳನ್ನು ರೂಪಿಸುವ ಕೆಲಸವನ್ನು ರಾಜ್ಯ ಸರ್ಕಾರಗಳಿಗೆ ನೀಡಿತ್ತು. ರಾಜೀವಗಾಂಧಿ ಸರ್ಕಾರದ ಕರಡು ಅದನ್ನು ಭಾರತದ ಪ್ರಧಾನ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರಿಗೆ ಒಪ್ಪಿಸ ಬಯಸುತ್ತಿವೆ.

ಮೂರನೆಯದಾಗಿ, ಪಂಚಾಯತೀ ರಾಜ್ಯ ಸಂಸ್ಥೆಗಳ ರಚನೆ, ಅದರ [illegible] ಕಾರ್ಯನಿರ್ವಹಣೆ ಇತ್ಯಾದಿಗಳು ಕಟ್ಟುನಿಟ್ಟಾಗಿ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರಬೇಕೆಂದು ನಮ್ಮ ಕರಡು ಮಸೂದೆ ಸೂಚಿಸಿತ್ತು. ಇದರ ಬದಲು ರಾಜೀವಗಾಂಧಿ ಸರ್ಕಾರದ ಮಸೂದೆ ಇದನ್ನು ಭಾರತದ ಸಂವಿಧಾನದ ಹೊರತಾಗಿ ವಿವಿಧ ರಾಜ್ಯಗಳಲ್ಲಿನ, ಅದರೊಳ ಒಂದೇರಾಜ್ಯದೊಳಗಿನ ವಿಭಿನ್ನ ಪ್ರದೇಶಗಳಲ್ಲಿನ ಭಿನ್ನ ಪರಿಸ್ಥಿತಿಗಳಿಗೆ ಅನುಗುಣವಾಗಿ ಇವನ್ನೆಲ್ಲಾ ರೂಪಿಸುವಂತೆ ರಾಜ್ಯ ಸರ್ಕಾರಗಳಿಗೆ ಅಡ್ಡಿ ಮಾಡುತ್ತದೆ. ನಮ್ಮ ಕರಡು ಭಿನ್ನ ಸನ್ನಿವೇಶಕ್ಕೆ ಅನುಗುಣವಾಗಿ ರೂಪಿಸಿಕೊಳ್ಳಲು ಅವಕಾಶ ನೀಡಿದ್ದರೆ, ರಾಜೀವಗಾಂಧಿ ಕರಡು ಅದನ್ನು ಅತ್ಯಂತ ಬಿಗುಗೊಳಿಸಿದೆ.

ಅಂದರೆ ಸದ್ಯದ ಈ ಮಸೂದೆ ವಿಕೇಂದ್ರೀಕರಿಸುವುದರ ಬದಲು ಇನ್ನಷ್ಟು ಕೇಂದ್ರೀಕರಿಸುತ್ತದೆ. ಕೇಂದ್ರ ಸರಕಾರದ ಎರಡು ಪ್ರಮುಖ ಅಂಗಗಳಾದ ಚುನಾವಣಾ ಆಯೋಗ ಮತ್ತು ಪ್ರಧಾನ ಲೆಕ್ಕ ಪರಿಶೋಧಕರಿಗೆ ಗ್ರಾಮ ಪಂಚಾಯತುಗಳ ಮೇಲೆ ಅಧಿಕಾರ ವಹಿಸಿಕೊಟ್ಟಿದೆ ಈ ಮಸೂದೆ. ಇಷ್ಟೇ ಅಲ್ಲ ನಮ್ಮ ಮಸೂದೆಯಲ್ಲಿ ರಾಜ್ಯ ಸರ್ಕಾರಕ್ಕೆ ನೀಡಿದ್ದ ಬಹಳಷ್ಟು ಕೆಲಸಗಳನ್ನು ಅಧಿಕಾರಗಳನ್ನು ಇದರಲ್ಲಿ ರಾಜ್ಯಪಾಲರಿಗೆ ವಹಿಸಿ ಕೊಡಲಾಗಿದೆ. ಈ ರಾಜ್ಯಪಾಲರುಗಳು ಸದಾ ಕೇಂದ್ರ ಸರ್ಕಾರದ ಆದೇಶದ [illegible] ಬಹಳ ಸಲ ರಾಜ್ಯದ ಚುನಾಯಿತ ಸರ್ಕಾರಕ್ಕೆ ವಿರುದ್ಧವಾಗಿಯೇ ವರ್ತಿಸುತ್ತಾರೆ ಎಂಬುದು ನಮೆಲ್ಲರ ಅನುಭವದ ಸಂಗತಿ.

ಪ್ರಧಾನ ಮಂತ್ರಿಗಳಿಗೆ ಮತ್ತು ಅವರ ಸಹೋದ್ಯೋಗಿಗಳಿಗೆ ನಾನೊಂದು ಸರಳ ನೇರ ಪ್ರಶ್ನೆ ಕೇಳಬಯಸುತ್ತೇನೆ: ಅವರು ತಮ್ಮ ಮಸೂದೆಯನ್ನು ವಾಪಾಸು ಪಡೆದು 1978 ರಲ್ಲಿ ನಾನು ಮತ್ತು ಇತರ ಹಲವು ಗೆಳೆಯರು ಸೂಚಿಸಿದ ಕರಡನ್ನು ಅಂಗೀಕರಿಸುವರೇ? [illegible] ನಮ್ಮ ಕರಡನ್ನು ಸ್ವೀಕರಿಸಲು ಅವರಿಗೆ ಏಕೆ ಸಾಧ್ಯವಿಲ್ಲ? [illegible] ಬದಲು ಕೇಂದ್ರದ ಚುನಾವಣಾ ಆಯೋಗ, ಪ್ರಧಾನ ನಿಯಂತ್ರಕರು ಲೆಕ್ಕಪರಿಶೋಧಕರು ಮತ್ತು ರಾಜ್ಯಪಾಲರು ನೇರವಾಗಿ ನಿಯಂತ್ರಿಸುವ [illegible] ಪಂಚಾಯತೀ ರಾಜ್ಯ ವ್ಯವಸ್ಥೆಯೇ ಬೇಕೆಂದು ಅವರು ಏಕೆ [illegible] ಎಂದಾದರೂ [illegible]?

ಸಿ. ಐ. ಟಿ. ಯು ಶ್ರದ್ಧಾಂಜಲಿ

ಕಾಮ್ರೇಡ್ ಎನ್.ಎಲ್. ಉಪಾದ್ಯಾಯರವರ ನಿಧನದಿಂದಾಗಿ, ಒಬ್ಬ ನಿಸ್ವಾರ್ಥ ಸೇವೆಗೈದ ನಾಯಕನನ್ನು ದುಡಿಯುವ ವರ್ಗ ಕಳೆದುಕೊಂಡಿದೆ. ಇವರು ಅರ್ಧ ಶತಮಾನಕ್ಕೂ ಹೆಚ್ಚು ಕಾಲ ದುಡಿಯುವ ವರ್ಗದ ಮುಕ್ತಿಗಾಗಿ ದುಡಿದಿದ್ದಾರೆ. ಮೊದಲು ಮುಷ್ಟಿಯಲ್ಲಿ ಸಿಲುಕಿದ್ದು ಆದರಿಂದ ಬಿಡುಗಡೆ ಹೊಂದಿ ಬೃಹತ್ ಹೋರಾಟಗಳಿಗೆ ತನ್ನನ್ನು ತಾನು ಅರ್ಪಿಸಿಕೊಳ್ಳಬೇಕಿದೆ. ಕಾಂ : ಎನ್.ಎಲ್.ರ ಬದುಕು ಮತ್ತು ತ್ಯಾಗ ಸದಾ ಏಕೀಕರಣ ಚಳಿವಳಿಯಲ್ಲಿ ಅವಿರತವಾಗಿ ದುಡಿದ ಇವರು ನಂತರ ಪ್ರಜಾಸತ್ತೆಯ ಸ್ಥಾಪನೆಗೆ ಮತ್ತು ಅಧಿಕಾರಶಾಹಿತ್ವ[illegible] ವಿರುದ್ಧವಾಗಿ ಹೋರಾಟಗಳಲ್ಲಿ ನಾಯಕ[illegible] ವಹಿಸಿದ್ದರು. ಅಲ್ಲದೆ ಕೊನೆವರೆಗು[illegible] ಸಾಮಾನ್ಯ ಜನತೆಯ ಜೀವ[illegible] ಮಟ್ಟವನ್ನು ಉತ್ಕೃಷ್ಟಗೊಳಿಸಲು ಸಮ[illegible] ಸಾರಿದ್ದವರು. ಇವೆಲ್ಲವೂ ದುಡಿಯು[illegible] ವರ್ಗದ ಚಳವಳಿಯ ಇನ್ನೊಂದು[illegible]



ತಾನು ಕಟ್ಟಿದ್ದ ದುಡಿಯುವ ವರ್ಗದ ಚಳವಳಿಗೆ ಅನೇಕ ಹೊಸ ಮುಂದಾಳುಗಳನ್ನು ಕೊಡುಗೆಯಾಗಿ ನೀಡಿದ ಎನ್.ಎಲ್. ಸರಳತೆಯನ್ನು ಬದುಕಿನ ಆದರ್ಶವಾಗಿಟ್ಟು ಕೊಂಡಿದ್ದರು. ಸದಾ ಕಾರ್ಮಿಕರ ಮಧ್ಯೆ ವರ್ಗ ಜಾಗೃತಿ ಹಾಗೂ ರಾಜಕೀಯ ಪ್ರಜ್ಞೆಯನ್ನು ಬೆಳೆಸುತ್ತಿದ್ದರು. ಇಂದಿನ ಕಾರ್ಮಿಕ ಸಂಘಟನೆಗಳು ಆರ್ಥಿಕವಾದದ ಕಪಿ ಕಾರ್ಮಿಕ ವರ್ಗಕ್ಕೆ ದಾರಿ ದೀಪವಾಗಿದೆ.

ಕರ್ನಾಟಕ ಸಿ.ಐ.ಟಿ.ಯು ರಾಜ್ಯ ಸಮಿತಿಯು. ಸಂಘಟನೆಯನ್ನು ಬಲಪಡಿಸುತ್ತಾ ವಿಸ್ತರಿಸುವುದರ ಮೂಲಕ ಲಕ್ಷಾಂತರ, ಅಸಂಘಟಿತ ಹಾಗೂ ಗ್ರಾಮೀಣ ಜನತೆಯ ಬದುಕನ್ನು ಸುಗಮಗೊಳಿಸಲು ಧೀರೋದ್ಧಾತ ಹೋರಾಟ ಮಾಡುವುದಾಗಿ ಪ್ರತಿಜ್ಞೆ ಮಾಡುತ್ತಿದೆ. ಈ ಮೂಲಕ ಕಾ: ಎನ್.ಎಲ್. ರಂತಹ ಸಮರಶೀಲ ನಾಯಕನಿಗೆ ನಿಜವಾದ ಶ್ರದ್ಧಾಂಜಲಿ ಅರ್ಪಿಸುತ್ತದೆ.

ರಾಷ್ಟ್ರೀಯ ಚಳಿವಳಿನಂತರ ಕರ್ನಾಟಕ

ರೂಪವಾಗಿದ್ದವು ಇವರ ಜೀವನದ ಎಲ್ಲ[illegible] ಘಟ್ಟಗಳೂ ಚಳವಳಿಯ[illegible] ಘಟ್ಟಗಳಾಗಿದ್ದವು.

ಕಾಂ : ಎನ್.ಎಲ್. ಎಂದೂ[illegible] ವೈಯಕ್ತಿಕ ಹಿತವನ್ನು ಸಾರ್ವಜನಿಕ[illegible] ಹಿತಕ್ಕಿಂತ ಮಿಗಿಲಾಗಿ ಕಾಣಲಿಲ್ಲ. ಸುಖವಾಗಿ ಬದುಕಬಹುದಾಗಿದ್ದ[illegible] ಕಾರ್ಮಿಕ ರಂಗದಲ್ಲೂ ಕೂಡ ಇವರು ಕನಿಷ್ಠ ಸೌಲಭ್ಯಗಳನ್ನು ಪಡೆಯಲಿಲ್ಲ.

ಅಂಗನವಾಡಿ ಕಾರ್ಯಕರ್ತೆಯರ ರಾಷ್ಟ್ರ ಸಮ್ಮೇಳನ

ಕೇಂದ್ರ ಸರಕಾರಿ ನೌಕರರೆಂದು ಪರಿಗಣಿಸಲು ಆಗ್ರಹ

ಅಂಗನವಾಡಿ ಕಾರ್ಯಕರ್ತೆಯರ ಪ್ರಥಮ ರಾಷ್ಟ್ರ ಸಮ್ಮೇಳನವು ಇತ್ತೀಚೆಗೆ (ಎಪ್ರಿಲ್ 22-24 ರವರೆಗೆ) ನವದೆಹಲಿಯಲ್ಲಿ ಹಿಮಾಚಲ ಭವನದಲ್ಲಿ ನಡೆಯಿತು. ಕರ್ನಾಟಕವೂ ಸೇರಿದಂತೆ 15 ರಾಜ್ಯಗಳಿಂದ ಅಂಗನವಾಡಿ ಕಾರ್ಯಕರ್ತೆಯರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಅಂಗನವಾಡಿ ಕಾರ್ಯಕರ್ತರನ್ನು ಕೇಂದ್ರ ಸರಕಾರಿ ನೌಕರರೆಂದು ಪರಿಗಣಿಸಬೇಕು, ಅವರ ಗೌರವಧನವನ್ನು ರೂ 600 (ಅಂಗನವಾಡಿ ಶಿಕ್ಷಕಿಗೆ) ಮತ್ತು ರೂ 400 (ಸಹಾಯಕಿಗೆ) ಕ್ಕೆ ಏರಿಸಬೇಕು, ಸೇವಾ ಅವಧಿ ಹಾಗೂ ವಿದ್ಯಾಭ್ಯಾಸಕ್ಕನುಣವಾಗಿ ಭಡ್ತಿ ಸೌಲಭ್ಯ ಒದಗಿಸಬೇಕು, ಹೆರಿಗೆ ಭತ್ಯೆ ಸೌಲಭ್ಯವನ್ನು ಎರಡು ಮಕ್ಕಳವರೆಗೆ ವಿಸ್ತರಿಸಬೇಕು, ಸುತ್ತೋಲೆಯ ಮೂಲಕ ಎಲ್ಲಾ ಸರಕಾರಿ ರಜೆಗಳನ್ನು ನೀಡಬೇಕು, ಬೋನಸ್ ನೀಡಬೇಕು, ತರಬೇತಿ ಸೌಲಭ್ಯ ವಿಸ್ತರಿಸಬೇಕು, ಪ್ರಯಾಣ ಭತ್ಯೆ ನೀಡಬೇಕು, ವರ್ಗಾವಣೆ ಸಂದರ್ಭದಲ್ಲಿ ವಾಸಸ್ಥಳಕ್ಕೆ ಸಮೀಪದಲ್ಲಿ ವೃತ್ತಿ ನೀಡಬೇಕು, ಕೇಂದ್ರ ಸರಕಾರ ರೂಪಿಸಿದ ಪ್ರೊಜೆಕ್ಟ್ ಸಮಿತಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆಗೆ ಪ್ರಾತಿನಿಧ್ಯ ಒದಗಿಸಬೇಕು. ಇವೇ ಮೊದಲಾದ ಪ್ರಮುಖ ಬೇಡಿಕೆಗಳನ್ನು ಸಮ್ಮೇಳನವು ಕೇಂದ್ರ ಸರಕಾರದ ಮುಂದಿರಿಸಿತು.

ಮೇಲಿನ ಪ್ರಮುಖ ಬೇಡಿಕೆಗಳನ್ನು ಆಗ್ರಹಿಸಿ ಜುಲೈ 10 ರಂದು ಬೇಡಿಕೆ ದಿನಾಚರಣೆ ಆಚರಿಸಲು, ಆಗಸ್ಟ್ ತಿಂಗಳಲ್ಲಿ ಬೃಹತ್ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮ ನಡೆಸಲು ಸಮ್ಮೇಳನವು ನಿರ್ಧರಿಸಿತು.

ಸಮ್ಮೇಳನವನ್ನುದ್ದೇಶಿಸಿ ಸಿ.ಐ.ಟಿ.ಯು. ಅಧ್ಯಕ್ಷರಾದ ಬಿ.ಟಿ. ರಣದಿವೆ ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಅಧ್ಯಕ್ಷರಾದ ವಿಮಲಾ ರಣದಿವೆ, ಅಹಲ್ಯ ರಂಗಣೇಕರ್, ನಿರುಪಮಾ ಚಟರ್ಜಿ, ಕನಕ ಮುಖರ್ಜಿ ಮೊದಲಾದವರು ಮಾತನಾಡಿದರು.

24 ರಂದು ನಡೆದ ಬೃಹತ್ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮವು ಕೇಂದ್ರ ಸರಕಾರ ಬೇಡಿಕೆಗಳ ಬಗ್ಗೆ ಗಂಭೀರವಾಗಿ ಪರಿಗಣಿಸುವ ವಾತಾವರಣ ನಿರ್ಮಿಸಿತು.


ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಸಂಚಾಲಕಿ ರಾಜಮ್ಮ, ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಜ್ಯ ಸಂಘಟನಾ ಸಮಿತಿ ಸದಸ್ಯೆ ಎಸ್. ಆರ್. ಲೀಲಾವತಿ, ಅಂಗನವಾಡಿ ಕಾರ್ಯಕರ್ತೆಯರ ಕುಂದಾಪುರ ತಾಲುಕು ಸಮಿತಿಯ ಅಧ್ಯಕ್ಷೆ ಲೀಲಾವತಿ ನಾಯಕ್ ರವರುಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.


ಸಂತಾಪ ಸಭೆ

ಕಾಂ. ಎನ್.ಎಲ್. ಉಪಾಧ್ಯಾಯರ ನಿಧನಕ್ಕೆ ಸಂತಾಪ ಸೂಚಿಸಲು ಜೂನ್ 2 ರಂದು ಸಂಜೆ 6 ಕ್ಕೆ ನಗರದ ಪುರಭವನದಲ್ಲಿ ಸರ್ವ ಪಕ್ಷಗಳ ಸಂತಾಪ ಸಭೆಯನ್ನು ಏರ್ಪಡಿಸಲಾಗಿದೆ. ವಿವಿಧ ಪಕ್ಷಗಳ ಗಣ್ಯರು ಈ ಸಭೆಯಲ್ಲಿ ಮಾತನಾಡಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ.

ಪಿ. ರಾಮಚಂದ್ರರಾವ್
ಕಾರ್ಯದರ್ಶಿ
ಸಿಪಿಐ(ಎಂ) ರಾಜ್ಯ ಸಮಿತಿ

ಅಂತ್ಯ ಕ್ರಿಯೆ ಸಭೆ





ಹರಿದಾಸ್ ಭಟ್

ಕಾಮ್ರೇಡ್ ಎನ್.ಎಲ್. ಗೆ ಲಾಲ್ ಸಲಾಂ

ಭೂಗ್ರಹಣ ನೇರ ಕಾರ್ಯಾಚರಣೆ
ಭಾರತದ ರೈತರ ಕೃಷಿ-ಕಾರ್ಮಿಕರ ತುರ್ತು ಬೇಡಿಕೆಗಳು

ಏಪ್ರಿಲ್ 18ರಂದುನವದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ಜರುಗಿದ ಭೂಸುಧಾರಣೆ ಕುರಿತಾದ ಅಖಿಲ ಭಾರತ ಸಮಾವೇಶದ ವರದಿಯನ್ನು ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಅಖಿಲ ಭಾರತ ಕಿಸಾನ್‌ಸಭಾ, ಅಖಿಲ ಭಾರತ ಕಿಸಾನ್ ಸಭಾ (ಅಜಯ್‌ಭವನ) ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ ಭಾರತೀಯ ಖೇತ್ ಮಜ್ದೂರ್ ಯೂನಿಯನ್, ಅಗ್ರಗಾಮಿ ಕಿಸಾನ್ ಸಭಾ, ಸಂಯುಕ್ತ ಕಿಸಾನ್ ಸಭಾ ಮತ್ತುಕೃಷಿ ಮಜ್ದೂರ್ ಯೂನಿಯನ್ ಈ ಏಳು ಸಂಘಟನೆಗಳು ಏರ್ಪಡಿಸಿದ್ದ ಈ ಸಮಾವೇಶ ಒಂದು ನಿರ್ಣಯವನ್ನು ಅಂಗೀಕರಿಸಿತು. ಅದರ ಕೆಲವು ಅಂಶಗಳನ್ನು ಇಲ್ಲಿ ಕೊಡಲಾಗಿದೆ.

''ಉಳುವವನೇ ಹೊಲದೊಡೆಯ'' ಭಾರತದ ರೈತಾಪಿ ವರ್ಗ ಸ್ವಾತಂತ್ರ್ಯ ಹೋರಾಟವನ್ನು ಸೇರಿದ್ದು ಈ ಸಮರ ಘೋಷದೊಂದಿಗೆ. ಭೂಮಾಲಿಕತ್ವವನ್ನು ಆಮೂಲಾಗ್ರವಾಗಿ ಅಂತ್ಯಗೊಳಿಸಿ, ಗ್ರಾಮೀಣ ಸಮಾಜದಲ್ಲಿ ಅವರ ಯಜಮಾನಿಕೆಯನ್ನು ನಾಶಗೊಳಿಸಿ ಉಳುವವನನ್ನು ಹೊಲದೊಡೆಯನಾಗಿಸುವುದು ಸ್ವಾತಂತ್ರ್ಯದ ಒಂದು ಆವಶ್ಯಕ ಅಂಗ ಎಂದು ರೈತಾಪಿ ವರ್ಗ ಭಾವಿಸಿತ್ತು. ಗ್ರಾಮೀಣ ಸಮಾಜದ ಈ ರೀತಿಯ ತೀವ್ರ ಪರಿವರ್ತನೆಯಿಂದ ಮಾತ್ರವೇ ಉದ್ದಿಮೆಗಳಿಗೆ ಒಂದು ವಿಸ್ತಾರವಾದ ಮಾರುಕಟ್ಟೆ ನಿರ್ಮಿಸಿ ದೇಶದ ಹಿಂದುಳಿದ ಕೃಷಿ ಆರ್ಥಿಕತೆಯನ್ನು ಒಂದು ಕೈಗಾರಿಕಾ ಆರ್ಥಿಕತೆಯಾಗಿ ಅಭಿವೃದ್ಧಿ ಪಡಿಸಬಹುದಾಗಿತ್ತು. ಇದು ಭಾರತೀಯ ಸಮಾಜವನ್ನು ಅಂಧಕಾರ, ನಿರಕ್ಷರತೆ ಮತ್ತು ಮತಾಂಧತೆಯಿಂದ ಉದ್ಧರಿಸಿ ಒಂದು ಪ್ರಗತಿಪರ 'ಆಧುನಿಕ ದೇಶವನ್ನಾಗಿ ಮಾಡುವಲ್ಲಿ ಯೂನೆರವಾಗಬಹುದಾಗಿತ್ತು.

ಇತ್ತೀಚಿಗೆ ಬಹಳ ದಿನಗಳಿಂದ ದೇಶ ಪ್ರತ್ಯೇಕತಾವಾದಿ, ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳಿಂದ ಬೆದರಿಕೆ ಎದುರಿಸುತ್ತಿದೆ. ವಾಯುವ್ಯ ಪ್ರದೇಶದಲ್ಲಿ, ಪಂಜಾಬಿನಲ್ಲಿ ಖಾಲಿಸ್ತಾನಿಗಳು ತಮ್ಮ ಮಾರಣಹೋಮ ಮುಂದುರಿಸುತ್ತಿದ್ದಾರೆ-ಈಗ ಜಮ್ಮು ಕಾಶ್ಮೀರದಲ್ಲಿ ಈ ಶಕ್ತಿಗಳು ಸಕ್ರಿಯಗೊಳ್ಳುತ್ತಿವೆ.

ಕೋಮು ಪರಿಸ್ಥಿತಿಯು ತೀವ್ರವಾಗಿ ಹದಗೆಡುತ್ತಿದೆ. ರಾಷ್ಟ್ರೀಯ ಐಕ್ಯತೆಯನ್ನು ಶಾಶ್ವತವಾಗಿ ಹಾಳುಗೆಡಹುವ ಬೆದರಿಕೆಯಿದೆ.

ಜಾತ್ಯತೀತತೆಯ ಹಗೆಗಳು ಕೋಮುಸೌಹಾರ್ದವನ್ನು ಛಿದ್ರಗೊಳಿಸಲು ಸಕ್ರಿಯರಾಗಿದ್ದಾರೆ ವಿಶ್ವಹಿಂದು ಪರಿಷತ್

ರೂಪಿಸಿದ ರಾಮಜನ್ಮಭೂಮಿ ಮುಕ್ತಿಸಮಿತಿ ನವಂಬರ್ 9 ರಂದು ಅಯೋಧ್ಯೆಯ ವಿವಾದಗ್ರಸ್ತ ಜಾಗದಲ್ಲಿ ಒಂದು ದೇವಸ್ಥಾನ ಕಟ್ಟುವ ನಿರ್ಣಯ ಮಾಡಿ ಒಂದು ಗಂಭೀರ ಸ್ಥಿತಿ ಉಂಟಾಗಿದೆ. ಇದೇ ರೀತಿ ಕೆಲವು ಮುಸ್ಲಿಂ ಮೂಲಭೂತವಾದಿಗಳೂ ಘರ್ಷಣೆಯ ಹಾದಿ ಹಿಡಿಯುತ್ತಿದ್ದಾರೆ.

'ರಾಮ ಜನ್ಮಭೂಮಿ' ಯ ಹೆಸರಿನಲ್ಲಿ ದೊಡ್ಡ ಕೋಮು ಉದ್ವೇಗ ಎಬ್ಬಿಸಲು ಹಿಂದೂ ಕೋಮುವಾದಿಗಳು ದೊಡ್ಡ ಪ್ರಚಾರ ಆರಂಭಿಸುತ್ತಿದ್ದಾರೆ. ದೇಶಾದ್ಯಂತ, ವಿಶೇಷವಾಗಿ ಉತ್ತರ ಪ್ರದೇಶದಲ್ಲಿ ಕೋಮು ವಿಷ ಹರಡುತ್ತಿದ್ದಾರೆ. ಹಜ್ಹೂರಿಂಬಾಗ್, ಮಥುರಾ ಮತ್ತಿತರ ಕಡೆಗಳಲ್ಲಿ ಇತ್ತೀಚಿನ ಗಲಭೆಗಳು ಮುಂಬರುವ ಅಪಾಯದ ಸೂಚನೆ. ದೇಶದ ಜಾತ್ಯತೀತ ಪ್ರಜಾ ಸತ್ತಾತ್ಮಕ ಪದ್ಧತಿಗೆ ಸ್ವಾತಂತ್ರ್ಯನಂತರ ಹಿಂದೆಂದೂ ಇಂತಹ ಬೆದರಿಕೆ ಬಂದಿರಲಿಲ್ಲ. ಕೋಮುಐಕ್ಯತೆಯನ್ನುಕದಡಿಸುವ ಶಕ್ತಿಗಳ ಪ್ರಯತ್ನ ಯಶಸ್ವಿಯಾದರೆ ದೇಶ ಶ್ರಮವಹಿಸಿ ಪಡೆದ ಸ್ವಾತಂತ್ರ್ಯ ಮತ್ತು ಐಕ್ಯತೆ ಅಪಾಯ ಕ್ಕೊಳಗಾಗುತ್ತದೆ.

ನಮ್ಮ ಜನತೆಯಲ್ಲಿನ ಎಲ್ಲಾ ಜಾತ್ಯತೀತ ಮತ್ತು ದೇಶಪ್ರೇಮಿ ಶಕ್ತಿಗಳು ಒಗ್ಗಟ್ಟಾಗಿ ಈ ಹಲ್ಲೆಗಳ ಮಹಾಪೂರವನ್ನು ಎದುರಿಸಬೇಕಾದ ಸಮಯವೀಗ ಬಂದಿದೆ. ನಾವು ನೆಮ್ಮಿಕೊಂಡಿರುವ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ

ಮೌಲ್ಯಗಳನ್ನು ನಮ್ಮೆಲ್ಲಾ ಶಕ್ತಿ ಬಳಸಿ ರಕ್ಷಿಸಿಕೊಳ್ಳಬೇಕೆಂಬುದನ್ನು ಹಿಂದೂಗಳು ಮುಸ್ಲಿಮರು, ಸಿಖ್ಖರು, ಕ್ರಿಶ್ಚಿಯನ್ನರು, ಬೌದ್ಧರು ಎಲ್ಲರೂ ಅರಿಯಬೇಕು. ಬಾಬ್ರಿಮಸೀಧಿ ರಾಮಜನ್ಮಭೂಮಿ ವಿವಾದದ ಆಧಾರದ ಮೇಲೆ ಐಕ್ಯತೆ

ಒಡೆಯುವವರನ್ನು ಬಯಲಿಗೆಳೆಯಬೇಕು. ದೇಶದ ಐಕ್ಯತೆಯನ್ನು ಏನೇ ಬಂದರೂ ಕಾಪಾಡಿಕೊಳ್ಳಬೇಕು.

ಕೋಮು ಧ್ರುವೀಕರಣ ತಡೆಯಲು ಸರಿಯಾದ ಸಮಯದಲ್ಲಿ ಮಧ್ಯ ಪ್ರವೇಶಿಸದೆ ತೀರಾ ಕೋಮುವಾದಿ ಶಕ್ತಿಗಳಿಗೆ ಕೋಮು ಉದ್ವೇಗ ಬಡಿದೆಬ್ಬಿಸಲು ಅವಕಾಶ ನೀಡುವ ಒಂದು ಧೋರಣೆಯನ್ನು ಭಾರತ ಸರಕಾರ ಅಂಗೀಕರಿಸಿದೆ. ಸೂಕ್ತ ಸಮಯದಲ್ಲಿ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಕರೆಯದೆ. ಈಗ ಎಡಪಕ್ಷಗಳು ಹಾಗು ಇತರ ಜಾತ್ಯತೀತ ಶಕ್ತಿಗಳು ಒತ್ತಾಯಿಸಿದ ಮೇಲೆ ಪ್ರಧಾನ ಮಂತ್ರಿಗಳು ಇಂತಹ ಸಭೆಯೊಂದು ನಡೆಯುವುದೆಂದು ಘೋಷಿಸಿದರು. ಆದರೆ ಅದಕ್ಕಿನ್ನು ದಿನಾಂಕ ಗೊತ್ತುಪಡಿಸಿಲ್ಲ. ಇನ್ನೂ ವಿಳಂಬ ಮಾಡದೆ ಮಂಡಳಿಯ ಸಭೆಯ ದಿನಾಂಕ ನಿರ್ಧರಿಸಬೇಕೆಂದು ಸಮಾವೇಶ ಒತ್ತಾಯಿಸುತ್ತದೆ. ಇದೇ ರೀತಿ ವಿವಾದದ ತ್ವರಿತ ನ್ಯಾಯಲಯದ ತೀರ್ಪಿಗಾಗಿ ಅಲಹಾಬಾದ್ ಹೈಕೋರ್ಟಿನಲ್ಲಿ ಒಂದು ವಿಶೇಷ ಪೀಠ ರಚಿಸಬೇಕೆಂದು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒತ್ತಾಯಿಸಿದ ನಂತರ ಕೇಂದ್ರ ಸರಕಾರವೂ ಈಗ ಇದನ್ನು ಒಪ್ಪಿಕೊಂಡಿದೆ. ಈಗ ನ್ಯಾಯಾಂಗ ಪ್ರಕ್ರಿಯೆಯನ್ನು ಈ ವಿವಾದಕ್ಕೆ ಸಂಬಂಧಪಟ್ಟ ಎಲ್ಲರೂ ಒಪ್ಪಿಕೊಳ್ಳುವುದು ಅಗತ್ಯ. ಯಾರೂ ಕೂಡಾ ಪರಿಸ್ಥಿತಿ ಉಲ್ಬಣಗೊಳಿಸಿ ಕೋಮು ಭಾವೋದ್ರೇಕಗಳಿಗೆ ನೀರೆರೆಯುವ ಯಾವುದೇ ಕ್ರಮ ಕೈಗೊಳ್ಳಬಾರದೆಂದು ಸಮಾವೇಶ ಒತ್ತಾಯಿಸುತ್ತದೆ.

ದೇಶಾದ್ಯಂತ ವಿಶೇಷವಾಗಿ ಉತ್ತರ ಪ್ರದೇಶದಲ್ಲಿ ಕೋಮು ಸಾಮರಸ್ಯ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸುವ ಒಂದು ಶಕ್ತಿಶಾಲೀ ಪ್ರಚಾರ ಮುಂದುವರಿಸಲು ಸಮಾವೇಶ ಕರೆ ನೀಡುತ್ತದೆ.

ಅಪಾಯವನ್ನು ಮನಗಂಡು ವಿಚ್ಛಿದ್ರಕಾರೀ ಶಕ್ತಿಗಳಿಗೆ ತಕ್ಕ ಪಾಠ ಕಲಿಸಬೇಕೆಂದು ಸಮಾವೇಶ ಭಾರತದ ಜನತೆಗೆ ಮನವಿ ಮಾಡಿಕೊಳ್ಳುತ್ತದೆ. ಕೋಮು ಸೌಹಾರ್ದ ಮತ್ತು ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ ಜನತೆಯ ಎಲ್ಲಾ ವಿಭಾಗಗಳ ಐಕ್ಯ ಮತ್ತು ಶಕ್ತಿಶಾಲೀ ದನಿ ಎತ್ತುವ ಸಮಯವೀಗ ಬಂದಿದೆ.

ಕೋಮುವಾದದವಿರುದ್ಧರಾಷ್ಟ್ರೀಯಸಮಾವೇಶ

ಮೂಲಭೂತವಾದೀಶಕ್ತಿಗಳವಿರುದ್ಧ ಐಕ್ಯದನಿಎತ್ತೋಣ

ಆದರೆ ಸ್ವಾತಂತ್ರ್ಯಾ ನಂತರ ಆರಂಭಿಸಿದ ಭೂಸುಧಾರಣಾ ಕ್ರಮಗಳು ಭೂಮಾಲಿಕತ್ವದ ಕೇಂದ್ರೀಕರಣವನ್ನು ಮುರಿಯಲಿಲ್ಲ. ಭೂಹೀನರಿಗೆ ಭೂಹಂಚಿಕೆಯಾಗಲಿಲ್ಲ, ಬದಲಾಗಿ ಗೇಣಿದಾರರನ್ನು ಪಾಲು-ಬೆಳೆಗಾರರನ್ನು ಒಕ್ಕಲೆಬ್ಬಿಸುವ ಕೆಲಸ ತೀವ್ರವಾಗಿ ನಡೆಯುವಂತಾಯಿತು.

1967-68ರಲ್ಲಿ ಕಾಂಗ್ರಸ್‌ನ ಅಧಿಕಾರದ ಗುತ್ತೇದಾರಿಕೆ ಮುರಿದಾಗ ಪಶ್ಚಿಮಬಂಗಾಳ, ಕೇರಳಗಳಲ್ಲಿ ಎಡಪಕ್ಷಗಳು ಪ್ರಮುಖ ಪಾತ್ರವಹಿಸಿದ್ದ ಸರಕಾರಗಳು ಬಂದಾಗ, ಕೃಷಿ-ಕೂಲಿಕಾರರು ಹಾಗೂ 'ರೈತರ ಹೋರಾಟಗಳು ತೀವ್ರಗೊಂಡಾಗ ಕೇಂದ್ರ ಸರ್ಕಾರ ಮತ್ತೊಮ್ಮೆ ಎಚ್ಚೆತ್ತು ಕೊಂಡಿತು.

ಆದರೆ ಇದುವರೆಗು ಕಾಂಗ್ರೆಸ್ ಸರಕಾರಗಳಾಗಲಿ, ಎಡ-ಪಕ್ಷಗಳಿಲ್ಲದ ಕಾಂಗ್ರೆಸ್ಸೇತರ ಸರಕಾರಗಳಾಗಲಿ ತೀವ್ರಗಾಮಿ ಭೂಸುಧಾರಣೆ ಜಾರಿಗೊಳಿಸುವಲ್ಲಿ ಶೋಚನೀಯವಾಗಿ ಸೋತಿವೆ. 1967 ರಲ್ಲಿ ಮಹಾಲನೋಬಿಸ್ ಸಮಿತಿ ಲೆಕ್ಕ ಹಾಕಿದ ಮಿಗುತೆ ಜಮೀನಿನ 7 ಶೇಕಡಾದಷ್ಟು ಮಾತ್ರವೇಇದುವರೆಗೆಮರುಹಂಚಿಕೆಗೊಂಡಿದೆ. ಗೇಣಿ ಕಾನೂನುಗಳಾಗಲೀ, ಭೂಮಿತಿಕಾನೂನುಗಳಾಗಲೀಕೇರಳ,ತ್ರಿಪುರಾ, ಪಶ್ಚಿಮ ಬಂಗಾಳ, ಬಿಟ್ಟರೆ ಬೇರೆಲ್ಲಾ ಕಡೆ ಸೋತಿವೆ. ಎಡರಂಗ ಮತ್ತು ಎಲ್.ಡಿ.ಎಫ್. ಸರಕಾರಗಳು ಮಾತ್ರವೇ ಭೂಮಿತಿ ಶಾಸನಗಳ ಲೋಪ ದೋಷಗಳನ್ನು ನಿವಾರಿಸಲು ಕ್ರಮ ಕೈಗೊಂಡಿವೆ. ಬೇನಾಮಿ ಜಮೀನುಗಳನ್ನು ಗುರುತಿಸಿ, ಹಂಚುವಲ್ಲಿ ಪಾಲು-ಬೆಳೆಗಾರರು ಗೇಣಿದಾರರ ಹೆಸರು ದಾಖಲಿಸುವಲ್ಲಿ ರೈತರನ್ನು ಒಳಗೊಳ್ಳುವ ಪ್ರಯತ್ನ ನಡೆಸಿವೆ. ಇತರ ಹೆಚ್ಚಿನ ರಾಜ್ಯಗಳಲ್ಲಿ ಅರಣ್ಯ, ಬಂಜರು , ಬೀಳು ಭೂಮಿಯನ್ನು ಭೂಹೀನರಿಗೆ, ಕೃಷಿ ಕಾರ್ಮಿಕರಿಗೆ ಹಂಚುವ ಭರವಸೆ ಇನ್ನು ನೆರವೇರಿಲ್ಲ. ಅಸ್ಸಾಂ, ಒರಿಸ್ಸಾ ,ಕರ್ನಾಟಕ, ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ್, ಆಂಧ್ರಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಸರಕಾರೀ ಬೀಳು ಭೂಮಿಯ, ಅರಣ್ಯ ಬಂಜರು ಭೂಮಿಯ ಬಡ ಉಳುಮೆದಾರರ ಮೇಲೆ ಸಾವಿರಾರು ಕೇಸುಗಳನ್ನು ಹಾಕಲಾಗಿದೆ. ಇದರಿಂದಾಗಿ ಗ್ರಾಮೀಣ ಜನ ಸಮೂಹಗಳಲ್ಲಿ ತೀವ್ರ ಅಸಂತೃಪ್ತಿ ಬೆಳೆಯುತ್ತಿದೆ. ಹೊಸದೊಂದು ಪ್ರಜ್ಞೆ ಹೊಸದೊಂದು ಜಾಗೃತಿ ಗ್ರಾಮೀಣ ಭಾರತದಲ್ಲಿ ಕಂಡುಬರುತ್ತಿದೆ.

ರೈತಆಂದೋಲನದುರ್ಬಲವಾಗಿರುವಲ್ಲಿ ಈ ಅಸಂತೃಪ್ತಿಯನ್ನು ತಪ್ಪು ದಾರಿಗೆಳೆಯಲು ಕೋಮುವಾದಿ, ಛಿದ್ರಕಾರಿ ಪ್ರತ್ಯೇಕತಾವಾದಿ ಶಕ್ತಿಗಳು ಸಾಮ್ರಾಜ್ಯಶಾಹಿಗಳ ಬೆಂಬಲದಿಂದ ಪ್ರಯತ್ನಿಸುತ್ತಿವೆ. ಈ ಜಾತಿವಾದಿ, ಕೋಮುವಾದಿ ಶಕ್ತಿಗಳನ್ನು ಭೂಮಾಲಿಕರು ಪ್ರಜಾಸತ್ತಾತ್ಮಕ ರೈತ ಆಂದೋಲನವನ್ನು ಒಡೆಯಲು ಬಳಸುತ್ತಿದ್ದಾರೆ.

ಈ ಎಲ್ಲ ಅಂಶಗಳನ್ನು ಪರಿಶೀಲಿಸಿ ಈ ಅಖಿಲ ಭಾರತ ಸಮಾವೇಶ ಕೃಷಿ ಉತ್ಪಾದನೆ ಹೆಚ್ಚಿಸಲು ಮತ್ತು ದೇಶದಲ್ಲಿ ನಿರುದ್ಯೋಗ ಕಡಿಮೆ ಮಾಡಲು ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಒತ್ತಾಯಿಸುತ್ತದೆ.

(1) ಭೂಮಿ ಹಾಸಿಗೆ ಮತ್ತು ದಾಖಲೆಯಾದ ಭೂಮಿಯೂ ಸೇರಿದಂತೆ ಎಲ್ಲಾ ಮಿಗುತೆ ಭೂಮಿಯ ವಿತರಣೆ ಕುರಿತಾದ ಶಾಸನಗಳಲ್ಲಿನ ಲೋಪದೋಷಗಳನ್ನು ಪಶ್ಚಿಮ ಬಂಗಾಳ ಮತ್ತು ಕೇರಳ ಮಾದರಿಯಲ್ಲಿ ನಿವಾರಿಸಬೇಕು.

(2) ಬಂಜರು, ಭೂದಾನ, ಬೀಳು, ಒಕ್ಕಲೆಬ್ಬಿಸಿದ ಜಮೀನನ್ನು ಭೂಹೀನರಿಗೆ ಪುಕ್ಕಟೆಯಾಗಿ ವಿತರಿಸಬೇಕು. ದಾವೆಗೊಳಗಾದ ಜಮೀನಿನ ಹಂಚಿಕೆ ಕುರಿತಂತೆ ತಕ್ಷಣ ಅಗತ್ಯವಿದ್ದರೆ ವಿಶೇಷಾಜ್ಞೆ ಹೊರಡಿಸುವ ತಮ್ಮ ಅಧಿಕಾರವನ್ನು ಬಳಸಿಯಾದರೂ ಅವಶ್ಯಕ ಶಾಸನವನ್ನು ರಾಜ್ಯ ಸರಕಾರಗಳು ಜ್ಯಾರಿಗೊಳಿಸಬೇಕು.

(3) ಗೇಣಿದಾರರ, ಪಾಲು-ಬೆಳೆಗಾರರ ಒಕ್ಕಲೆಬ್ಬಿಸುವುದನ್ನೆಲ್ಲಾ ಪ್ರತಿಬಂಧಿಸಿ ದಯಿನ್ನೂ ದಾಖಲೆಗಳಲ್ಲಿ ಅವರ ಹಕ್ಕುಗಳನ್ನು ದಾಖಲಿಸಬೇಕು. ಗೇಣಿದಾರರಿಗೆ ಒಡೆತನದ ಹಕ್ಕು ನೀಡುವ ಸೂಕ್ತ ಶಾಸನವನ್ನು ರಚಿಸಿ ಭೂಮಾಲೀಕರ ಶೋಷಣೆಯನ್ನು ಅಂತ್ಯಗೊಳಿಸಬೇಕು. ಧಾರ್ಮಿಕ ಮತ್ತು ಇತರ ಉಂಬಳಿ ಜಮೀನಿನ ಗೇಣಿದಾರರಿಗೆ ಗೇಣಿಯ ಭದ್ರತೆ ನೀಡಿ ದಾಖಲಿಸಬೇಕು. ಸಂಬಂಧಪಟ್ಟ ಸಂಸ್ಥೆಗಳಿಗೆ ಸೂಕ್ತ ಪರಿಹಾರ ನೀಡಿ ಈಗೇಣಿದಾರರಿಗೆ ಒಡೆತನ ನೀಡಬೇಕು.

(4) ದಯಿನ್ನೂ ಅಥವಾ ಅರಣ್ಯ ಜಮೀನನ್ನು ಹೊಂದಿರುವ ಎಲ್ಲಾ ಭೂಹೀನರಿಗೆ ಪಟ್ಟಾ ಕೊಡಬೇಕು. ಯಾವುದೇ ನೆಪದ ಮೇಲೆ ಬದಲೀ ಜಮೀನು ನೀಡದೆ ಯಾರನ್ನು ಒಕ್ಕಲೆಬ್ಬಿಸಬಾರದು.

(5) ಲೇವಾದೇವಿಗಾರರು, ಇತರ ಭೂಮಾಲೀಕರು ಕಸಿದುಕೊಂಡ ಆದಿವಾಸಿಗಳ ಭೂಮಿಯನ್ನು ಅವರಿಗೆ ಹಿಂದಿರುಗಿಸಬೇಕು. ಆದಿವಾಸಿಗಳಿಂದ ಜಮೀನು ವರ್ಗಾವಣೆ ಬಯಸುವ ದಾವೆಗಳನ್ನು ಯಾವ ನ್ಯಾಯಾಲಯವೂ ವಿಚಾರಣೆಗೆ ಸ್ವೀಕರಿಸಲು ಅನುಮತಿ ನೀಡಬಾರದು.

(6) ಎಲ್ಲಾ ಭೂಹೀನ ಮತ್ತು ಅತೀ ಸ್ವಲ್ಪ ಜಮೀನು ಹೊಂದಿದವರ ಅಧೀನಕ್ಕೆ ತಕ್ಷಣ ಜಮೀನನ್ನು ಪೂರ್ಣವಾಗಿ ಮತ್ತು ವಸ್ತುತಃ ಕೊಡಬೇಕು. ಅವರನ್ನು ಎಬ್ಬಿಸುವ ಪ್ರಯತ್ನಗಳ ವಿರುದ್ಧ ಸೂಕ್ತ ರಕ್ಷಣೆ ನೀಡಬೇಕು. ಎಲ್ಲಾ ಬೇನಾಮಿ ವರ್ಗಾವಣೆಗಳನ್ನು ರದ್ದುಗೊಳಿಸಬೇಕು.

(7) ಭೂ ಸುಧಾರಣೆಯ ಫಲಾನುಭವಿಗಳಿಗೆ ಅಗತ್ಯ ಸಾಲ, ಸಾಮಗ್ರಿ ಹಾಗೂ ಇತರ ಕೃಷಿ ಅವಶ್ಯಕ ಬೆಂಬಲವನ್ನು ಒದಗಿಸಿಕೊಡಬೇಕು.

(8) ಭೂ ಮಾಲೀಕರ ಕಾನೂನು ಬಾಹಿರ ಅಧೀನದಲ್ಲಿರುವ ಸರಕಾರೀ ಜಮೀನನ್ನು ವಶಪಡಿಸಿಕೊಂಡು ಬಡವರಿಗೆ ಕೊಡಬೇಕು. ಕೈಗಾರಿಕೋದ್ಯಮಿಗಳಿಗೆ ಮಂಜೂರು ಮಾಡಿದ್ದ, ಅವರ ಅವರು ಬಳಸುತ್ತಿರದ ಜಮೀನನ್ನು ವಾಪಾಸು ಪಡೆದು ಭೂಹೀನರಿಗೆ ನೀಡಬೇಕು.

(9) ಹಾಗು ಅವರಿಗಾಗಿರದ ಎಲ್ಲಾ ಅರಣ್ಯ ಜಮೀನನ್ನು ಆದಿವಾಸಿಗಳಿಗೆ ಮತ್ತು ಅರಣ್ಯಗಳಲ್ಲಿ ಅಥವಾ ಸುತ್ತಮುತ್ತಲು ವಾಸಿಸುವ ಭೂಹೀನ ಬಡವರಿಗೆ ಅರಣ್ಯಕೆಲಸಕ್ಕೆ ಕೊಡಬೇಕು. ಇತ್ತ ಅರಣ್ಯ ಸಾಮಗ್ರಿಗಳನ್ನು ಮಾರುಕಟ್ಟೆಗಳನ್ನು ನಿಗಮದ ವ್ಯವಸ್ಥೆ ಮಾಡಬೇಕು. ಇವನ್ನು ಬಡವರಿಗೆ ಮಾತ್ರ ನೀಡಬೇಕು. ಕೈಗಾರಿಕೋದ್ಯಮಿಗಳಿಗೆ ಭೂಮಾಲೀಕರಿಗೆ ಕೊಡಬಾರದು.

(10) ಭೂಮಾಲೀಕರು ಭ್ರಷ್ಟಾಚಾರ, ಭ್ರಷ್ಟ ವಿಧಾನಗಳ ಮೂಲಕ ಬಗಲಿಗೆ ಹಾಕಿಕೊಂಡ ಸರಕಾರೀ ಜಮೀನಿನ ಪಟ್ಟಾಗಳನ್ನೆಲ್ಲಾ ರದ್ದುಗೊಳಿಸಬೇಕು.

ಕೃಷಿ ಕಾರ್ಮಿಕರು, ಗೇಣಿದಾರರು, ಪಾಲು ಬೆಳೆಗಾರರು ಮತ್ತು ಇತರೆ ರೈತರು ಒಟ್ಟುಗೂಡಿದೇಶಾದ್ಯಂತಒಕ್ಕಲೆಬ್ಬಿಸುವುದನ್ನು' ಎದುರಿಸಲು, ಭೂಮಿತಿಯನ್ನು ಮೀರಿದ ಮಿಗುತೆ ಒಕ್ಕಲೆಬ್ಬಿಸಲ್ಪಟ್ಟ, ಬೀಳು ಅಥವಾ ಸಾಗುವಳಿ ಯೋಗ್ಯ ಬಂಜರು ಭೂಮಿಯನ್ನು ಕಂಡುಹಿಡಿದು, ಗುರುತಿಸಿ ಗ್ರಹಣ ಮಾಡಲು ಹಾಗೂ ಅದರ ಒಡೆತನ ಹಕ್ಕು ಪಡೆಯಲು ಸ್ವೀಕರಿಸಿ ಭೂಮಾಲೀಕರ ಕಾಳಿಕ್ಕೆ ಕುಣಿಯದಂತೆ ಒತ್ತಡ ತರಲು ನೇರ ಕಾರ್ಯಾಚರಣೆಗಿಳಿಯಬೇಕೆಂದು ಈ ಸಮಾವೇಶ ಕರೆ ನೀಡುತ್ತದೆ. ಈ ಶಕ್ತಿಶಾಲೀ ಐಕ್ಯ ಆಂದೋಲನ ಕೃಷಿಕಾರ್ಮಿಕರಿಗೆ ಮತ್ತು ರೈತರಿಗೆ ಭೂಮಿಯನ್ನು ಬೆಂಬಲಿಸುವ ಎಲ್ಲಾ ಶಕ್ತಿಗಳಿಗೆ ಮತ್ತು ಅದನ್ನು ವಿರೋಧಿಸುವ ಎಲ್ಲಾ ಶಕ್ತಿಗಳಿಗೆ ಒಂದು ಒರೆಗಲ್ಲಾಗಲಿ! ಈ ನೇರ ಕಾರ್ಯಾಚರಣೆಯನ್ನು ಎಲ್ಲಾ ರೀತಿಯಲ್ಲಾ ಬೆಂಬಲಿಸಿ ರೈತರ ಮತ್ತು ಕೃಷಿಕೂಲಿಗಾರರ ಹೋರಾಟದಲ್ಲಿ ಜತೆಗೂಡಬೇಕೆಂದು ಸಮಾವೇಶ ಎಲ್ಲಾ ಪ್ರಜಾಪ್ರಭುತ್ವವಾದಿಗಳಿಗೆ ಕರೆ ನೀಡುತ್ತದೆ.

ಈ ಆಂದೋಲನದ ಭಾರೀ ಯಶಸ್ಸಿಗೆ ನಿರುದ್ಯೋಗ ಮತ್ತು ಬಡತನದ ಸಮಸ್ಯೆ ಎದುರಿಸುವಲ್ಲಿ ಭೂ ಪ್ರಶ್ನೆಯನ್ನು ಕೃಷಿ ಕಾರ್ಮಿಕರ ಮತ್ತು ಭೂಹೀನ ರೈತರ ಪರವಾಗಿ ಪರಿಹರಿಸುವುದರ ತುರ್ತನ್ನು ದೇಶ ಮನಗಾಣುವಂತೆ ಮಾಡಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಈ ಸಮಾವೇಶ ಸಂಯೋಜಕ ಸಮಿತಿಗೆ ಅಧಿಕಾರ ನೀಡುತ್ತದೆ.

ಮೇ 9 ರಂದು ನವದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ''ಕೋಮು ಸೌಹಾರ್ದ ಮತ್ತು ರಾಷ್ಟ್ರೀಯ ಐಕ್ಯತೆಗಾಗಿ ರಾಷ್ಟ್ರೀಯ ಸಮಾವೇಶ ನಡೆಯಿತು. ನಾಲ್ಕು ಎಡಪಕ್ಷಗಳಾದ ಸಿ.ಪಿ.ಐ.ಎಂ., ,ಸಿ.ಪಿ.ಐ., ಆರ್.ಎಸ್.ಪಿ. ಮತ್ತು ಫಾರ್ವರ್ಡ್‌ಬ್ಲಾಕ್‌ಏರ್ಪಡಿಸಿದ್ದ ಈ ಸಮಾವೇಶದಲ್ಲಿ ವಿ.ಪಿ ಸಿಂಗ್ ಮತ್ತಿತರ ಕೆಲವು ವಿರೋಧಪಕ್ಷಗಳ ಸಾಮಾಜಿಕ ಸಂಘಟನೆಗಳ ಮುಖಂಡರುಗಳು ಮತ್ತು ಕೆಲವು ಪ್ರತಿಷ್ಠಿತ ವ್ಯಕ್ತಿಗಳೂ ಭಾಗವಹಿಸಿದ್ದರು. ಸಮಾವೇಶ ಅಂಗೀಕರಿಸಿದ ನಿರ್ಣಯವನ್ನು ಮುಂದೆ ಕೊಡಲಾಗಿದೆ:

ಗೆಳೆತನದ ಸಂಬಂಧ
ಬೆಳವಣಿಗೆಗೆ ಅಡ್ಡಿ ತರಬೇಡಿ

ಇತ್ತೀಚಿಗೆ 55 ಸಂಸತ್ ಸದಸ್ಯರು ಚೀಣಾ ಸರಕಾರದ ಟಿಬೇಟ್ ಕುರಿತಾದ ಧೋರಣೆಯನ್ನು ಟೀಕಿಸಿ ನೀಡಿರುವ ಹೇಳಿಕೆಯನ್ನು ಸಿ.ಪಿ.ಐ(ಎಂ) ಪಾಲಿಟ್ ಬ್ಯೂರೋ ಖಂಡಿಸಿದೆ. ಈ ಸದಸ್ಯರಲ್ಲಿ ಬಹು ಪಾಲು ಕಾಂಗ್ರೆಸ್ (ಐ) ಗೆ ಸೇರಿದವರು. ಕೆಲವರು ಕೆಲವು ವಿರೋಧ ಪಕ್ಷಗಳಿಗೆ ಸೇರಿದವರು. ಈ ಹೇಳಿಕೆ ಚೀಣಾ ಜನತಾ ಗಣತಂತ್ರದ ಆಂತರಿಕ ವ್ಯವಹಾರಗಳನ್ನು ಟೀಕಿಸಿ, ದಲಾಯಿ ಲಾಮಾರೊಡನೆ ಅವರ ಶರತ್ತುಗಳ ಮೇಲೆ ಮಾತುಕತೆ ನಡೆಸಲು ಚೀಣಾ ಸರಕಾರಕ್ಕೆ ಕರೆ ನೀಡಿರುವುದು ದುರದೃಷ್ಟಕರ ಎಂದು ಪಾಲಿಟ್‌ಬ್ಯೂರೋ ಹೇಳಿದೆ. ದೇಶದ ಸಮಗ್ರತೆ ಮತ್ತು ಐಕ್ಯತೆಯ ಚೌಕಟ್ಟಿನೊಳಗೆ ಮಾತುಕತೆಗೆ ಸಿದ್ಧ ಎಂದು ಚೀಣಾ ಸರಕಾರ ಹಲವು ಬಾರಿ ಹೇಳಿರುವುದರತ್ತ ಪಾಲಿಟ್‌ಬ್ಯೂರೋ ಗಮನ ಸೆಳೆದಿದೆ.

ಇಂತಹ ನಿಲುವು ಇತ್ತೀಚಿಗೆ ಸುಧಾರಣೆ ಕಾಣುತ್ತಿರುವ ಭಾರತ - ಚೀಣಾ ಸಂಬಂಧಗಳಿಗೆ ಕುಂದು ತರಬಹುದಷ್ಟೆ ಎಂದು ಸಿ.ಪಿ.ಐ(ಎಂ) ಭಾವಿಸುತ್ತದೆ. ಒಂದು ದೇಶದ ಆಂತರಿಕ ಸಮಸ್ಯೆಗಳು ಇನ್ನೊಂದು ದೇಶ ಆ ದೇಶದ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸುವ ವಿಷಯಗಳಾಗಬಾರದು. ಇಂತಹ ಆಚಾರಣೆ ಗೆಳೆತನದ ವಾತಾವರಣವನ್ನು ಕೆಡಿಸುತ್ತದಷ್ಟೆ. ನಮ್ಮ ಎರಡು ದೇಶಗಳ ಜನತೆಗಳ ಹಿತಾಸಕ್ತಿಗಳಿಗೆ ಮಹತ್ವದ್ದಾದ ಉತ್ತಮ ಸಂಬಂಧಗಳ ಬೆಳವಣಿಗೆಗೆ ಅಡ್ಡಿಯಾಗುತ್ತದೆ ಎಂದು ಪಾಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಚೀಣಾದೊಡನೆ ಸಂಬಂಧಗಳನ್ನು ಸಾಮಾನ್ಯಗೊಳಿಸುವ, ಗಡಿ ವಿವಾದವನ್ನು ಮಾತುಕತೆಯ ಮೂಲಕ ಇತ್ಯರ್ಥಗೊಳಿಸುವ ಅಗತ್ಯವನ್ನು ಸಿ.ಪಿ.ಐ(ಎಂ) ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದೆ. ಈ ವಿಷಯದಲ್ಲಿ ಎರಡು ಕಡೆ ಪ್ರಗತಿ ಕಂಡು ಬರುತ್ತಿರುವುದು ಒಳ್ಳೆಯ ಸಂಗತಿ. ಇದು ನಮ್ಮೆರಡು ದೇಶಗಳ ಹಿತಾಸಕ್ತಿಗಳಿಗೆ, ಈ ಪ್ರದೇಶದಲ್ಲಿ ಶಾಂತಿ ಸ್ಥಾಪನೆಗೆ ಅತ್ಯುತ್ತಮ. ಈ ಗೆಳೆತನದ ಸಂಬಂಧಗಳ ಬೆಳವಣಿಗೆಗೆ ಅಡ್ಡಿ ತರುವ ಯಾವುದೇ ಕೆಲಸ ಮಾಡಬಾರದೆಂದು ಸಿ.ಪಿ.ಐ(ಎಂ) ಪಾಲಿಟ್ ಬ್ಯೂರೋ ಹೇಳಿದೆ.

ಕಾಮ್ರೇಡ್ ಎನ್.ಎಲ್. ಗೆ ಲಾಲ್ ಸಲಾಂ

ಜೀವಂತ ಕೊಂಡಿಯನ್ನು ಕಳಕೊಂಡಿದ್ದೇವೆ.

—ವಿ.ಜೆ.ಕೆ. ನಾಯರ್

ಕಾಮ್ರೇಡ್ ಎನ್.ಎಲ್.ರ ಪಾರ್ಥಿವ ಶರೀರವನ್ನು ನಿನ್ನೆಯಷ್ಟೇ ಅಗ್ನಿಗಾಹುತಿ ಮಾಡಿದ್ದೇವೆ. ವಿಶ್ವದ ಈ ಭಾಗದಲ್ಲಿ, ಅಂದರೆ ಕರ್ನಾಟಕದಲ್ಲಿ - ಅತ್ಯಂತ ಸುಂದರ ತತ್ವಜ್ಞಾನದ, ಕಾರ್ಯಾಚರಣೆಯ ದೃಢ ಸಿದ್ಧಾಂತದ ಚೈತನ್ಯವನ್ನು ತುಂಬಿಕೊಂಡ ಮನ ಚಿಂತನೆ ನಿಲ್ಲಿಸಿತು - ಶಾಶ್ವತವಾಗಿ.

ಪರಿವರ್ತನೆಯ ತೀವ್ರ ಆಕಾಂಕ್ಷೆಯೊಂದಿಗೆ ಸಾಕಷ್ಟು ಪರಿವರ್ತನೆಯಾಗಿಲ್ಲ ಎಂಬ ಕಾತರ ಹೊತ್ತ, ಆದರೂ ಎಷ್ಟೊಂದು ಪಡೆಗೊಂಡ, ಮೃದು ಹಾಗೂ ಅತ್ಯಂತ ಮಾನವೀಯ ಭಾವನೆಗಳನ್ನು ಹೊರ ಹೊಮ್ಮುವ ಮುಖವನ್ನು ನಾವೆಂದಿಗೂ ಕಾಣಲಾರೆವು.

ಆದರೆ ಅವರ ದೈಹಿಕ ಗೈರು ಹಾಜರಿ ಅದೆಷ್ಟೇ ನೋವುಂಟು ಮಾಡುವಂತದಿದ್ದರೂ ಅವರು ಈ ರಾಜ್ಯದಲ್ಲಿ ತೋರಿದ ದಾರಿಯಲ್ಲಿ ಮುನ್ನಡೆಯುತ್ತೇವೆ. ಉಚ್ಚ ಶಿಕ್ಷಣ ಹಾಗೂ ಉದ್ಯೋಗವನ್ನರಸಿ ತಮ್ಮ ಹುಟ್ಟೂರನ್ನು ಬಿಟ್ಟ, ಔಪಚಾರಿಕ ಶಿಕ್ಷಣ ಮತ್ತು ಜೀವನದಲ್ಲೊಂದು ಉಚ್ಚಸ್ಥಾನ ಗಳಿಸುವ ಆಕಾಂಕ್ಷೆ ಇವೆಲ್ಲಾ ದೇಶವೇ ಸ್ವತಂತ್ರವಾಗಿರದಾಗ ಅರ್ಥಹೀನವೆಂದು ಭಾವಿಸಿದರು. ನಮ್ಮ ರಾಷ್ಟ್ರೀಯ ವಿಮೋಚನಾ ಹೋರಾಟದತ್ತ ಸೆಳೆಯಲ್ಪಟ್ಟ ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು. ಸಾಮ್ರಾಜ್ಯಶಾಹೀ ಆಳ್ವಿಕೆಯಿಂದ ಜನಸಮೂಹಗಳಿಗೂ ಸ್ವಾತಂತ್ರ್ಯ ದೊರೆಯದೆ ಜೀವನಕ್ಕೆ ಅರ್ಥವೂ ಇಲ್ಲ, ಕಾರ್ಮಿಕವರ್ಗ ಸಕ್ರಿಯವಾಗಿ ಭಾಗವಹಿಸದೆ ಸ್ವಾತಂತ್ರ್ಯ ಗಳಿಸುವುದೂ ಸಾಧ್ಯವಿಲ್ಲ ಎಂದು ಅರಿತು ಕೊಂಡ ಮೇಲ್ಪಟ್ಟದ ವಿದ್ಯಾರ್ಥಿಗಳಲ್ಲೊಬ್ಬರಾಗಿದ್ದರು ಅವರು. ಆಗ ನಮ್ಮ ದೇಶದ ಕಾರ್ಮಿಕ ವರ್ಗದ ಮುಂದುವರಿದ ಠಾಣೆಯಾಗಿದ್ದ ಮುಂಬೈಯಲ್ಲಿ, ಕಾರ್ಮಿಕ ವರ್ಗದ ಪಕ್ಷದೊಳಕ್ಕೆ ಪ್ರವೇಶ ಪಡೆದ ಕೆಲವೇ ಅಂತಹ ವಿದ್ಯಾರ್ಥಿಗಳಲ್ಲಿ ಅವರೂ ಒಬ್ಬರು. ಅವರ ಈ ಸಾಮರ್ಥ್ಯವನ್ನು ಮೆಚ್ಚಿ ಪಕ್ಷವನ್ನು ಕಟ್ಟಲು ಅವರನ್ನು ಸ್ವಂತ ರಾಜ್ಯಕ್ಕೆ ಕಳುಹಿಸಲಾಯಿತು.

ಕಾಮ್ರೇಡ್ ಎನ್.ಎಲ್. ರನ್ನು ಪಕ್ಷಕ್ಕೆ ಸೇರಿಸಿಕೊಂಡ ಸಂಗತಿಯಲ್ಲಿ ನಾವು ಎರಡು ಪ್ರವಾಹಗಳು - ರಾಷ್ಟ್ರೀಯ ವಿಮೋಚನೆಯ ಪ್ರವಾಹ ಕಾರ್ಮಿಕ ವರ್ಗದ ಕ್ರಾಂತಿಯೊಂದಿಗೆ ವಿಲೀನ ಗೊಂಡಿದ್ದನ್ನು ಮತ್ತು ಅದು ತನ್ನದೇ ನಾಡಿನತ್ತ, ಜನತೆಯತ್ತ ಮತ್ತೆ ಹರಿದು ಬರುವುದನ್ನು ಕಾಣಬಹುದು. ಯಾಕೆಂದರೆ ತನ್ನ ಜನತೆಯ, ನಾಡಿನ ಪ್ರೀತಿ ಮತ್ತು ಅದರ ಸಂಕುಚಿತತೆಯಿಂದ ವಿಮೋಚನೆ ಇದು ಎಲ್ಲಾ ಸಾಮಾಜಿಕ ಬದ್ಧತೆಯ ಮೂಲ.

ಸಹಜವಾಗಿಯೇ ಇದು ಅವರನ್ನು ಆಂದೋಲನದ ಮುಂದಿನ ಘಟ್ಟಕ್ಕೆ ಅಂದರೆ ಕರ್ನಾಟಕ ಏಕೀಕರಣ ಚಳುವಳಿಗೆ ಕೊಂಡೊಯ್ದಿತು.

ನಲ್ವತ್ತರ ದಶಕದ ಭಾರತ, ಅದರಲ್ಲೂ ವಿಶೇಷವಾಗಿ ರಾಜಪ್ರಭುತ್ವ - ಇದ್ದ ಮೈಸೂರು ಸಂಸ್ಥಾನ - ಒಬ್ಬ ಕ್ರಾಂತಿಕಾರಿ ಮುಕ್ತವಾಗಿ ಸಕ್ರಿಯವಾಗಿರಲು ಸಾಧ್ಯವಿದ್ದ ಪ್ರದೇಶವೇನೂ ಆಗಿರಲಿಲ್ಲ. ಬ್ರಿಟಿಶ್ ಅರಸರಷ್ಟೇ ಅಲ್ಲ, ಅವರ ದಲ್ಲಾಳಿಗಳೂ, ರಾಷ್ಟ್ರೀಯ ಆಂದೋಲನದ ಮುಖಂಡರು, ಬೂರ್ಜ್ವಾಗಳು, ಊಳಿಗಮಾನ್ಯ ಪ್ರಭು ಮತ್ತು ಸಂಸ್ಥಾನಗಳ ರಾಜರುಗಳು ಇದರಲ್ಲಿ ಬ್ರಿಟಿಷರ ಮಿತ್ರರಾಗಿದ್ದರು. ಅದೇ ರೀತಿ ಅವರು ಬೂರ್ಜ್ವಾಗಳ ಮಿತ್ರರೂ ಆಗಿದ್ದರು. ಸ್ವಾಭಾವಿಕವಾಗಿಯೇ ಒಬ್ಬ ಕಾರ್ಮಿಕ ವರ್ಗದ ಕ್ರಾಂತಿಕಾರಿ ಅವರಿಗೆ ಸ್ವೀಕಾರಾರ್ಹನಾಗಲಾರ.

ಎರಡನೇ ಮಹಾಯುದ್ಧದ ಸಮಯದಲ್ಲಿ ಪಕ್ಷದ ನಿಲುಮೆ ಬದಲಾಗಿ ಫ್ಯಾಸಿಸ್ಟರ ಸೋಲಿನ ಮೇಲೆ ಕೇಂದ್ರೀಕರಿಸಿದಾಗ ಒಬ್ಬ ಕಾರ್ಮಿಕ ವರ್ಗದ ಕ್ರಾಂತಿಕಾರಿಯ ದೃಷ್ಟಿಯಲ್ಲಿ ಫ್ಯಾಸಿಸಂ ಮತ್ತು ಪ್ರಜಾ ಪ್ರಭುತ್ವದ ನಡುವೆ ತೀವ್ರ ಜಾಗತಿಕ ಹೋರಾಟ ಮತ್ತು ಆಗ ಇದ್ದ ಏಕೈಕ ಸಮಾಜವಾದೀ ದೇಶ ಸೋವಿಯತ್ ಒಕ್ಕೂಟದ ಜೀವನ್ಮರಣ ಹೋರಾಟಕ್ಕೂ ತನ್ನ ತಾಯ್ನಾಡಿನಲ್ಲಿ ಆತ ನಡೆಸುತ್ತಿದ್ದ ಹೋರಾಟಕ್ಕೂ ನಿಕಟ ಸಂಬಂಧವಿತ್ತು. ಹೇಗಾದರೂ ಅಧಿಕಾರ ಗ್ರಹಿಸಿಕೊಂಡು ಸಧ್ಯದ ಗುಲಾಮ ರೀತಿಯ ಪರಿಸ್ಥಿತಿಯನ್ನೇ ನಿರಂತರಗೊಳಿಸಲು ಪ್ರಯತ್ನಿಸುತ್ತಿದ್ದ ಬೂರ್ಜ್ವಾಗಳಿಗೆ ಫ್ಯಾಸಿಸ್ಟ್ ಜರ್ಮನಿಯ ಕೈಲಿಯಲ್ಲಿ ಬ್ರಿಟನ್ನಿನ ಶೋಚನೀಯ ಪರಿಸ್ಥಿತಿ ಒಂದು ಇತ್ಯರ್ಥಕ್ಕೆ ಬರಲು ಒತ್ತಡ ಹೇರಬಹುದಾದ ಒಂದು ಅವಕಾಶವೆಂದಷ್ಟೇ ಕಂಡು ಬಂದಿತ್ತು.

ಕಾಮ್ರೇಡ್ ಎನ್.ಎಲ್.ಪ್ರಕಾರ ರಾಜ್ಯದಲ್ಲಿ ನಮ್ಮ ಆಂದೋಲನದ ದುರ್ಬಲತೆಯ ಮೂಲವೆಂದರೆ ಇಲ್ಲಿ 1942 ರಲ್ಲಿ ಆಂದೋಲನ ಆರಂಭವಾದದ್ದು. ರಾಷ್ಟ್ರೀಯ ಆಂದೋಲನದ ಎಲ್ಲಾ ಕಮ್ಯುನಿಸ್ಟರನ್ನು ವಿಶ್ವಾಸಘಾತುಕರು ಎಂದು ಕೂಗುತ್ತಾ ಅವರನ್ನು ವಿರೋಧಿಸುತ್ತಿದ್ದ ಸಮಯದಲ್ಲಿ ಪಕ್ಷ ಅವರನ್ನು ಇಲ್ಲಿಗೆ ಕಳುಹಿಸಿತ್ತು. ಅಂದರೆ ರಾಷ್ಟ್ರೀಯ ಆಂದೋಲನದ ಪ್ರವಾಹದೊಂದಿಗೆ ಈ ರಾಜ್ಯದ ಜನಗಳ ನಡುವೆ ಪಕ್ಷ ಬೇರು ಬಿಡುವುದು ಸಾಧ್ಯವಾಗಲಿಲ್ಲ.

ಈ ಎಲ್ಲಾ ತೀವ್ರ ಮಿತಿಗಳಿದ್ದಾಗ್ಯೂ ಅವರು ಮತ್ತು ಇತರ ಸಂಗಾತಿಗಳು ಕಟ್ಟಿದ ಪಕ್ಷ ತ್ವರಿತ ಮುನ್ನಡೆ ಸಾಧಿಸಿತು. ಗಣಿಪಟ್ಟಣ ಕೆ.ಜಿ.ಎಫ್‌ನ್ನು ಅದು ಕಾರ್ಮಿಕ ವರ್ಗದ ಕೋಟೆಯಾಗಿಸಿತು. ಬೆಂಗಳೂರಿನಲ್ಲಿದ್ದ ಎಲ್ಲಾ ಕಾರ್ಖಾನೆಗಳಲ್ಲೂ ಅದು ಕಾರ್ಮಿಕ ಸಂಘಗಳನ್ನು ಸ್ಥಾಪಿಸಿತು. ಜವಳಿ ಕೇಂದ್ರವಾದ ದಾವಣಗೆರೆಯಲ್ಲಿ ಸ್ಥಾಪನೆಗೊಂಡಿತು. ಹರಿಹರದ ಯಂತ್ರಸಾಮಗ್ರಿ ಕಾರ್ಖಾನೆಯಲ್ಲಿ ಕಾರ್ಮಿಕರನ್ನು ಸಂಘಟಿಸಿತು. ಇದು ಆಗಿನ ಮೈಸೂರು ಮಹಾರಾಜನಿಗೆ ಸಹಿಸಲಾಗಲಿಲ್ಲ. ಎನ್.ಎಲ್.ರನ್ನು ಆತ ಮುಂಬೈ ಪ್ರಾಂತ್ಯಕ್ಕೆ ಗಡೀಪಾರು ಮಾಡಿದ.

ಎನ್.ಎಲ್. ಧೃತಿಗೆಡಲಿಲ್ಲ. ಮುಂಬೈ ಕರ್ನಾಟಕಕ್ಕೆ ಅವರ ಗಡೀಪಾರು ಕೂಡಾ ಒಂದು ವರವಾಯಿತು. ಹುಬ್ಬಳ್ಳಿಯಲ್ಲಿ ಈ ಮೊದಲೇ ಆರಂಭವಾಗಿದ್ದ ರೈಲ್ವೇ ಕಾರ್ಮಿಕರ, ಸಂಘಟನೆಗೆ, ರಾಜ್ಯ ಕೇಂದ್ರ ಸಂಘಟಿಸುವುದಕ್ಕೆ, ಪಕ್ಷದ ಪತ್ರಿಕೆ 'ಜನಶಕ್ತಿ' ಪ್ರಕಟಣೆ ಆರಂಭಿಸುವುದಕ್ಕೆ ಎಲ್ಲಕ್ಕೂ ಮಿಗಿಲಾಗಿ ಕಾರವಾರದ ರೈತಾಪಿಯನ್ನು ಬ್ರಿಟಿಶ ಹಾಗೂ ಸ್ಥಳೀಯ ಭೂಮಾಲೀಕರ ವಿರುದ್ಧ ಸಂಘಟಿಸುವುದಕ್ಕೆ ಅದು ನಾಂದಿಯಾಯಿತು.

ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಪಕ್ಷದ ಯಶಸ್ಸಿನಿಂದಾಗಿ ಬೂರ್ಜ್ವಾ ವರ್ಗ ಪಕ್ಷದ ಮೇಲೆ ಇನ್ನಷ್ಟು ಆಘಾತ ಮಾಡಿತು. ಸ್ವಾತಂತ್ರ್ಯದ ನಂತರ ಪಕ್ಷದ ರಾಜಕೀಯ ನಿಲುಮೆಯಲ್ಲಿನ ತೊಯ್ದಾಟ ಇದಕ್ಕೆ ಮತ್ತಷ್ಟು ತುಪ್ಪ ಸುರಿಯಿತು. ಆದರೂ ರಾಜ್ಯದಲ್ಲಿ ಪಕ್ಷ ಮತ್ತೊಮ್ಮೆ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಹೋರಾಟದಲ್ಲಿ ಮುಂದಾಳಾಯಿತು. ಜವಾಬ್ದಾರಿ ಸರಕಾರ ಬೇಕೆಂದು ಒತ್ತಾಯಿಸಿ ಕೆ.ಜಿ.ಎಫ್.ನ ಗಣಿಕಾರ್ಮಿಕರು 21 ದಿನಗಳ ಮುಷ್ಕರ ಮಾಡಿದರು.

ಮಹಾರಾಜ ಒಪ್ಪಲೇಬೇಕಾಯಿತು.

ಭಾಷಾವಾರು ರಾಜ್ಯಗಳ ರಚನೆ ಕುರಿತು ಪಕ್ಷ ಸೋವಿಯತ್ ಒಕ್ಕೂಟ ಈ ದೇಶೀ ಪ್ರಶ್ನೆಯನ್ನು ಬಗೆಹರಿಸಿದ ಮಾದರಿಯಲ್ಲಿ ತನ್ನ ನೀತಿ ರೂಪಿಸಿತು. ಎನ್.ಎಲ್ ಈಗ ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಮುಂದಾದರು. ಅಂದಿನ ಮೈಸೂರು ಸಂಸ್ಥಾನದ ಜಾತಿವಾದಿ ಶಕ್ತಿಗಳು ಏಕೀಕರಣದ ಹೋರಾಟದಿಂದ ತಮಗೆ ಬೆದರಿಕೆ ಎಂದು ಭಾವಿಸಿದರು. ಆದರೂ ಪಕ್ಷ ತನ್ನ ದಾರಿಯಲ್ಲಿಯೇ ಮುಂದುವರೆಯಿತು. ದೇಶದ ಇತರ ರಾಜ್ಯಗಳಂತೆ ಕರ್ನಾಟಕವೂ ಒಂದಾಯಿತು. ಆದರೆ ಮತ್ತೆರಡು ದಶಕಗಳವರೆಗೆ ಅದು ಮೈಸೂರು ಎಂಬ ಹೆಸರನ್ನೇ ಹೊತ್ತು ನಿಂತಿತು.

ಸ್ವಾತಂತ್ರ್ಯದ ಕ್ಷಣದಲ್ಲೇ ಎಡಪಂಥವಾದದ ಹಿಡಿತದಲ್ಲಿದ್ದ ಪಕ್ಷ ಅದರಿಂದ ಬಿಡಿಸಿಕೊಂಡ ಕ್ಷಣವೇ ಬಲಪಂಥೀಯ ತಪ್ಪು ಹಾದಿಯತ್ತ ತಳ್ಳಲ್ಪಟ್ಟಿತು. ಅತ್ಯಂತ ದುರ್ಭರ ಪರಿಸ್ಥಿತಿಗಳಲ್ಲಿ ಪಕ್ಷವನ್ನು ಕಟ್ಟಿದವರು ಅವರ ಐಕ್ಯತೆ ಕಾದುಕೊಳ್ಳಬೇಕೆಂದು ಬಯಸಿದರು. ಎನ್.ಎಲ್. ಇವರಿಗಿಂತ ಭಿನ್ನವಾಗಿರಲಿಲ್ಲ. ಆದರೆ ಕ್ರಾಂತಿಯ ಗುರಿಗೆ ಬದ್ಧರಾದವರಿಗೆ ಉದ್ದೇಶ ಹೀನ ಐಕ್ಯತೆಗಿಂತ ಬೂರ್ಜ್ವಾ - ಭೂಮಾಲಕ ಕೂಟದ ವರ್ಗ ಆಳ್ವಿಕೆಯ ವಿರುದ್ಧ ಯಾವ ರಾಜಿಗೂ ಒಪ್ಪದ ಐಕ್ಯತೆ ಹೆಚ್ಚು ಮುಖ್ಯವಾಗಿತ್ತು. 1964 ರ 7ನೇ ಮಹಾಧಿವೇಶನದಲ್ಲಿ ಪಕ್ಷವನ್ನು ಪುನಸಂಘಟಿಸಬೇಕಾಗಿ ಬಂತು. ಎನ್.ಎಲ್. ಹೀಗೆ ಮರು ಸಂಘಟನೆಗೊಂಡ ಪಕ್ಷದೊಂದಿಗೆ, ನಮ್ಮ ಸಿ.ಪಿ.ಐ.(ಎಂ) ನೊಂದಿಗೆ ನಿಂತರು.

1967 ರ ನಂತರ ಪಕ್ಷದಲ್ಲಿ ಮತ್ತೆ ಎಡ ಪಂಥವಾದ ತಲೆ ಎತ್ತಿತು. ಪಕ್ಷ ಅದನ್ನು ಯಶಸ್ವಿಯಾಗಿ ಎದುರಿಸಿತು. 1968 ರಲ್ಲಿ ಎಂಟನೇ ಮಹಾಧಿವೇಶನ ಈ ಹಿನ್ನೆಲೆಯಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಕಾಂ. ಎನ್.ಎಲ್. ರಾಜ್ಯ ಕಾರ್ಯದರ್ಶಿ ಸ್ಥಾನವನ್ನು ತ್ಯಜಿಸಿದರು.



ಎನ್.ಎಲ್. ಜತೆ ನನ್ನ ವೈಯಕ್ತಿಕ ಸಂಪರ್ಕ ಈ ಅವಧಿಯಲ್ಲಿ ಆಯಿತು. ಯಾಕೆಂದರೆ ನಾನು ಪಕ್ಷಕ್ಕೆ ಬಂದದ್ದು ಆಗಲೇ.

ಅವರು ಈಗ ಸಂಘಟನಾತ್ಮಕವಾಗಿ ಮುಂದಿನ ಸ್ಥಾನದಲ್ಲಿಲ್ಲದಿದ್ದರೂ ಆಗಷ್ಟೇ ಪಕ್ಷದೊಳಗೆ ಕಾಲಿಟ್ಟಿದ್ದ ನಮ್ಮಂತವರಿಗೆ ಶಕ್ತಿಯ ದೊಡ್ಡ ನೆಲೆಯಾಗಿದ್ದರು. ಅವರು ಪಕ್ಷದ ಹಿಂದಿನ ದಿನಗಳನ್ನು ತನ್ನ ಕಥನ, ತಾವು ಹೊಂದಿದ್ದ ದಸ್ತಾವೇಜುಗಳು ಹಾಗೂ ಯಾವುದೇ ಚರ್ಚೆಯಲ್ಲಿ ಸಕ್ರಿಯ ಪಾತ್ರದ ಮೂಲಕ ನಮ್ಮ ಮುಂದೆ ಬಿಚ್ಚಿರುವಲ್ಲಿ ಸದಾ ನೆರವಾಗುತ್ತಿದ್ದರು. ಪಕ್ಷದಲ್ಲಿ ಎಡ ಪಂಥವಾದ ಮತ್ತೆ ತಲೆಯೆತ್ತಿದಾಗ ಎನ್.ಎಲ್. ಮೂಕ ಪ್ರೇಕ್ಷಕರಾಗಿ ನಿಲ್ಲಲಿಲ್ಲ. 1973ರಲ್ಲಿ ಕಾಮ್ರೇಡ್ ಇ.ಎಂ.ಎಸ್.ಗೆ ಅವರು ಬರೆದ ಪತ್ರ ರಾಜ್ಯ ಮುಖಂಡತ್ವದ ದೌರ್ಬಲ್ಯವನ್ನು ಹೊರಗೆಳೆಯಲು ನೆರವಾಯಿತು.

ತುರ್ತು ಪರಿಸ್ಥಿತಿಯ ನಂತರ ಪಂಥವಾದೀ ಸಂಘಟನಾ ದೃಷ್ಟಿಯ ವಿರುದ್ಧ ಪಕ್ಷದೊಳಗಿನ ತೀವ್ರ ಹೋರಾಟ ಸಫಲವಾದಾಗ ರಾಜ್ಯ ಸಮಿತಿ ಮರು ಸಂಘಟನೆಗೊಂಡಿತು.

ಹತ್ತನೇ ಮಹಾಧಿವೇಶನದಲ್ಲಿ (1978) ಮತ್ತು ಸಾಲ್ಕಿಯಾಪ್ಲಿನಂ (1978 ರ ಅಂತ್ಯ) ದಲ್ಲಿ ಹೊಸ ಲೈನು ರೂಪಗೊಳ್ಳುವುದರೊಂದಿಗೆ ಪಕ್ಷ ಇಂದಿನ ಹರಹು ಮತ್ತು ಶಕ್ತಿ ಪಡೆಯುವಂತಾಯಿತು. ಪಕ್ಷದ ಹಳೆಯ ಮತ್ತು ಬಲಶಾಲಿ ಪ್ರದೇಶಗಳಲ್ಲಿ ಕ್ರೋಢೀಕರಣದೊಂದಿಗೆ ಹೊಸ ಮತ್ತು ಪಕ್ಷ ದುರ್ಬಲವಾಗಿರುವ ಪ್ರದೇಶಗಳಿಗೆ ವಿಸ್ತರಿಸುವ ಪ್ರಯತ್ನದಲ್ಲಿ, ಅದರದೇ ಆದ ಸಮಸ್ಯೆಗಳಿದ್ದವು - ಬೆಳವಣಿಗೆಯ ಸಮಸ್ಯೆಯಿತ್ತು. ಸರ್ವಾಧಿಕಾರೀ - ವಿರೋಧಿ ಶಕ್ತಿಗಳೊಂದಿಗೆ ಪಕ್ಷದ ಬಲ ಹಿಗ್ಗಿದ ಜತೆಗೇ ಎಡವೇಷದ ಜನ ಕ್ರಿಶ್ಚಿಯನ್ ಮಿಶನರಿಗಳು, ಅವರ ಏಜೆಂಟರೂ ಬಂದರು.

ಪಕ್ಷದಲ್ಲಿ ತಲೆನೆರೆತವರು ಯುವಕರು ಎಂಬ ಹೆಸರಿನಲ್ಲಿ ಅವರು ಹರಿಯ ಬಿಟ್ಟ ಹೋರಾಟದಲ್ಲಿ ಕಾಮ್ರೇಡ್ ಎನ್.ಎಲ್. ಸ್ಥಾಪಕ ಶಕ್ತಿಯಾಗಿದ್ದರು. ಅವರೆಂದೂ, ಯುವಕರ ವಿರುದ್ಧ ನಿಲುವು ತಳೆಯಲಿಲ್ಲ. ಅದ್ರೆ ವಯಸ್ಸಾದವರ ವಿಶೇಷ ಈ ಜನಗಳ ಹಲ್ಲೆಗಳ ಬಗ್ಗೆ ಎಂದೂ ರಾಜಿ ಮನೋಭಾವ ತೋರಲಿಲ್ಲ. 1978ರಲ್ಲಿ ಮೈಸೂರು ಪ್ಲೀನಂನಲ್ಲಿ ಅವರು ಮಧ್ಯ ಪ್ರವೇಶಿಸಿ ಚರ್ಚೆ ಮತ್ತೆ ಸರಿಯಾದ ದಾರಿಗೆ ಬರುವಂತೆ ಮಾಡಿದ್ದು, 1978ರ ಮೊದಲು ಪಕ್ಷದಲ್ಲಿ ಏನೂ ಕಾಣದವರ ಬಾಯಿಗಳನ್ನು ಮುಚ್ಚಿಸಿದ್ದು ಇನ್ನೂ ನೆನಪಿನಲ್ಲಿ ಹಸಿರಾಗಿದೆ.

1982ರಲ್ಲಿ ಕೂಡ ರಾಜ್ಯ ಸಮಿತಿಯ ಮರು ಸಂಘಟನೆಗೆ ಕಾಂ.ಎನ್ನೆಲ್ ನೆರವಾದರು.

1982ರ ಆರಂಭದಲ್ಲಿ ಅವರು ಹನ್ನೊಂದನೇ ಮಹಾಧಿವೇಶನದಲ್ಲಿ ಭಾಗವಹಿಸಿದರು. ಇದು 7ನೇ ಮಹಾಧಿವೇಶನದ ನಂತರ ಅವರು ಭಾಗವಹಿಸಿದ್ದ ಏಕಮಾತ್ರ ಮಹಾಧಿವೇಶನವಾಗಿತ್ತು. ವೇದಿಕೆಯ ಮೇಲೆ ಭಾವೋದ್ವೇಗಕ್ಕೆ ಒಳಗಾದ ಅವರು ತಮ್ಮ ಭಾಷಣ ಮುಗಿಸಲು ಸಾಧ್ಯವಾಗಲಿಲ್ಲ. ವಿಜಯವಾಡದಲ್ಲಿ ಅವರಿಗೆ ಹೃದಯಾಘಾತವಾಗಿ ಆಸ್ಪತ್ರೆಗೆ ಸೇರಿಸಲಾಯಿತು.

ಅಂದಿನಿಂದ ಎನ್.ಎಲ್. ದೈಹಿಕವಾಗಿ ನರಳುತ್ತಿದ್ದರು. ಒಂದು ವರ್ಷದ ಹಿಂದೆ ಡಯಾಲಿಸ್ ಮೇಲಿರಲೇ ಬೇಕಾಗಿ ಬಂದು ಇನ್ನು ಸಾಧ್ಯವಿಲ್ಲ ಎನ್ನುವವರೆಗೂ ಅವರು ಸದಾ ರಾಜ್ಯ ಸೆಕ್ರೆಟಾರಿಯಟ್ ಮತ್ತು ರಾಜ್ಯ ಸಮಿತಿ ಸಭೆಗಳಲ್ಲಿ ಭಾಗವಹಿಸ ಬಯಸುತ್ತಿದ್ದರು.

ಎನ್.ಎಲ್. ಒಬ್ಬ ವ್ಯಕ್ತಿಯಾಗಿ ಇನ್ನಿಲ್ಲ. ಹೊರಟು ಹೋದರು. ಆದರೆ ಶೋಷಣೆ, ದಾರಿದ್ರ್ಯ ಇರುವವರೆಗೆ, ಸ್ವಾರ್ಥದ ಮೇಲೆ ಮಾನವೀಯತೆ ಪ್ರಾಬಲ್ಯ ಪಡೆದಿರುವವರೆಗೆ, ನಿಸ್ವಾರ್ಥ ಸೇವೆಗೆ ತಮ್ಮನ್ನು ಮುಡಿಪಿಟ್ಟು ಕೊಳ್ಳುವ ವ್ಯಕ್ತಿಗಳಿರುವವರೆಗೆ ಎನ್.ಎಲ್ ಒಂದು ಆಸದೃಶ ಮಾದರಿ.

ವೈಯಕ್ತಿಕವಾಗಿ ನಾನು ರಾಜ್ಯದಲ್ಲಿ ನನ್ನ ಅತ್ಯಂತ ಪ್ರಿಯ ಮುಖಂಡರನ್ನು ಕಳಕೊಂಡಿದ್ದೇನೆ ಎಂದು ಹಿಂಜರಿಕೆಯಿಲ್ಲದೆ ಹೇಳಬಲ್ಲೆ. ನನ್ನ ಮನದಾಳವನ್ನು ಬಿಚ್ಚಿಡುತ್ತಿದ್ದ, ನನ್ನ ಸಮೂಹದಲ್ಲಿ ಬೇರೆಲ್ಲರಿಗಿಂತಲೂ ಯೋಚನೆಯಲ್ಲಿ ನನಗೆ ನಿಕಟರೆನಿಸಿದ್ದ ಮುಖಂಡರನ್ನು ಕಳಕೊಂಡಿದ್ದೇನೆ.

ಎನ್.ಎಲ್‌ರ ನಿಧನದಿಂದ ನಾವು ನಮ್ಮ ಚಳುವಳಿಯ ಆ ಅಮೂಲ್ಯ ಜೀವಂತ ಕೊಂಡಿಯನ್ನು ಕಳಕೊಂಡಿದ್ದೇವೆ. ಇತಿಹಾಸ ನಮಗೆ ಮಾರ್ಗದರ್ಶನವಾಗಿರುವಂತೆ ಅವರೂ ನಮಗೆ ಮಾರ್ಗದರ್ಶಕರಾಗಿಯೇ ಉಳಿಯುತ್ತಾರೆ. ವರ್ತಮಾನ ನಮ್ಮ ಶಕ್ತಿಯಾಗಿರುವಂತೆ ಪಕ್ಷ ತನ್ನ ಸ್ಥಾನದಲ್ಲಿ ಭದ್ರವಾಗಿದೆ. ಭವಿಷ್ಯ ಮಾನವಕುಲ ಯಾವುದರತ್ತ ಸಾಗುತ್ತಿದೆಯೋ ಆ ಆಶಾಕಿರಣ. ಅದನ್ನು ಸಾಧಿಸುವುದರಲ್ಲಿ ನಾವು ಎಂದೂ ವಿಫಲರಾಗುವುದಿಲ್ಲ. ಈ ಗುರಿಸಾಧನೆಯಲ್ಲೇ ಎನ್.ಎಲ್.ರ ಗುರಿಸಾಧನೆ. ಹೀಗೆ ಅವರು ಅಮರ.

೨೮-೫-೧೯೮೮.

Printed and published by P. RAMACHANDRA RAO on behalf of Communist Party of India (Marxist), Karnataka State Committee, L-56, K.V. Temple Street, Sulthanpet, Bangalore- 560053. Phone No. 75331 Editor: P. RAMACHANDRA RAO
Managerial Office: C/O Kr... Prakashana, Shobha Lodge Complex, 5th Main Road, Gandhinagar, Bangalore-560009